ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBL

ಶುಕ್ರವಾರ, ದಿನಾಂಕ ೨೭ನೇ ಫೆಬ್ರವರಿ ೧೯೮೭, ಫಾಲ್ಗುಣ ೮, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದರು].

ಸನ್ಮಾನ್ಯ ಅಧ್ಯಕ್ಷರೇ,

ನಾನು ೧೯೮೭–೮೮ರ ಬಜೆಟ್ ಅಂದಾಜುಗಳನ್ನು ಮಂಡಿಸುತ್ತೇನೆ.

೨ ಈ ಬಜೆಟ್ ಮಂಡಿಸುವ ಸಂದರ್ಭದಲ್ಲಿಯೂ, ಕಳೆದ ಜನವರಿ ೩೧ರಂದು ನಮ್ಮ ರಾಜ್ಯದ ಸುಮಾರು ೬೦,೦೦೦ ಮಂದಿ ಜನತೆಯ ಚುನಾಯಿತ ಪ್ರತಿನಿಧಿಗಳು ಸೇರಿದ್ದ ಬೃಹತ್ ಸಭೆಯ ಭವ್ಯ ದೃಶ್ಯ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ತಮ್ಮಲ್ಲಿ ಅನೇಕ ಮಂದಿ ಆ ದೃಶ್ಯವನ್ನು ನೋಡಿದ್ದೀರಿ. ಅದೊಂದು ಅಭೂತಪೂರ್ವ ಸಮ್ಮೇಳನ. ಇಂಥ ದೊಡ್ಡ ಜನತೆಯ ಅಧಿಕೃತ ಪ್ರತಿನಿಧಿಗಳ ಸಭೆ ಜರುಗಿದುದು ಬಹುಶಃ ಮಾನವ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿ ಇರಬೇಕು. ಪ್ರತಿಯೊಂದು ಗ್ರಾಮದಿಂದಲೂ ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಸೇರಿದ್ದರು. ನಾನು ಗ್ರಾಮೀಣ ಕರ್ನಾಟಕದ ಈ ನವ ಪ್ರಭುಗಳ ಕಣ್ಣಲ್ಲಿ ಉತ್ಸಾಹ ಹಾಗೂ ನಿರೀಕ್ಷೆಗಳು ಮಿಂಚುತ್ತಿದ್ದುದನ್ನು ಕಂಡೆ. ಆ ದಿನ ಕರ್ನಾಟಕದಲ್ಲಿ ಪಂಚಾಯತ್ ರಾಜ್ಯದ ಉದಯವಾಯಿತು. ಅದೊಂದು ಅವಿಸ್ಮರಣೀಯ ಚಾರಿತ್ರಿಕ ಘಟನೆ. ನಮ್ಮ ದೇಶದಲ್ಲಿ ಎರಡನೆಯ ಅಧಿಕಾರ ವರ್ಗಾವಣೆ ಆ ದಿನ ನಡೆಯಿತು. ೧೯೪೭ರಲ್ಲಿ ಬ್ರಿಟಿಷರಿಂದ ಭಾರತ ಸರ್ಕಾರಕ್ಕೆ ಮೊದಲ ಬಾರಿಗೆ ಅಧಿಕಾರವು ವರ್ಗಾವಣೆಯಾದ ನಂತರ ಅಧಿಕಾರದ ಬಹುಭಾಗ ನ್ಯಾಯಬದ್ಧವಾಗಿ ಯಾರಿಗೆ ಸೇರಬೇಕಾಗಿತ್ತೋ, ಆ ಜನತೆಗೆ ಅಧಿಕಾರವನ್ನು ವರ್ಗಾಯಿಸಲು ಸುಮಾರು ನಾಲ್ಕು ದಶಕಗಳೇ ಬೇಕಾದವು ಈ ದೇಶದಲ್ಲಿ ಈ ವರ್ಗಾವಣೆಯಾಗಿರುವ ಏಕೈಕ ರಾಜ್ಯವೆಂದರೆ ಕರ್ನಾಟಕ ಮಾತ್ರ ಎಂಬುದು ಹೆಮ್ಮೆಯ ವಿಷಯ. ಅಧಿಕಾರದ ವಿಕೇಂದ್ರೀಕರಣ ನಮ್ಮ ಪಕ್ಷವು ದೃಢವಾಗಿ ನಂಬಿರುವ ಒಂದು ತತ್ವ. ಅಲ್ಲದೆ ಅದು ಜನತೆಗೆ ನಾವು ನೀಡಿದ ಅತಿ ಮುಖ್ಯ ಆಶ್ವಾಸನೆಯೂ ಹೌದು. ಇಂದು ಆ ಆಶ್ವಾಸನೆಯನ್ನು ನಾವು ಈಡೇರಿಸಿದ್ದೇವೆ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿ ಚುನಾವಣಾ ಫಲಿತಾಂಶವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಕರ್ನಾಟಕದ ಮತದಾರರ ಪ್ರಬುದ್ಧತೆ ಮತ್ತು ವಿವೇಚನಾಶೀಲತೆಯಲ್ಲಿ ನಾವಿಟ್ಟ ಭರವಸೆ ಎಷ್ಟು ಸಾರ್ಥಕ ಎನ್ನುವುದು ಮನದಟ್ಟಾಗುತ್ತದೆ.

೩ ಪಂಚಾಯತ್ ರಾಜ್ಯ ಸಂಸ್ಥೆಗಳು ೧೯೮೭ರ ಏಪ್ರಿಲ್ ೧ರಿಂದ ಕಾರ್ಯಾರಂಭ ಮಾಡುತ್ತವೆ. ಈ ಸಂಸ್ಥೆಗಳು ಮಹತ್ತರವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿವೆ ಅಧಿಕಾರಿಗಳ ಜೊತೆಗೆ ಭಾರಿ ಸಂಪನ್ಮೂಲಗಳನ್ನೂ ಇವರಿಗೆ ವರ್ಗಾಯಿಸಲಾಗುವುದು. ಜನತೆಗೆ ಈ ಸಂಸ್ಥೆಗಳು ನಿಕಟವಾಗಿರುವುದರಿಂದ ಅವರ ಕಾರ್ಯನಿರ್ವಹಣೆಯನ್ನು ಜನತೆ ನಿಕಟವಾಗಿ ಹಾಗೂ ವಿಮರ್ಶಾತ್ಮಕವಾಗಿ ಅವಲೋಕಿಸುತ್ತಿರುತ್ತಾರೆ. ಇಡೀ ರಾಷ್ಟ್ರವೇ ಈ ಗ್ರಾಮೀಣ ಆಡಳಿತವನ್ನು ತುಂಬ ಆಸಕ್ತಿಯಿಂದ ಗಮನಿಸುತ್ತಿರುತ್ತದೆ ಸರ್ಕಾರದ ಈ ಘಟಕಗಳು ತಮ್ಮ ಕರ್ತವ್ಯಗಳನ್ನು ಜನತೆಗೆ ತೃಪ್ತಿಕರವಾಗಿ ನಿರ್ವಹಿಸುವುವು ಎಂಬ ವಿಶ್ವಾಸ ನನಗಿದೆ. ಈ ವರಿಷ್ಠ ಸದನದ ಪರವಾಗಿ ನಾನು ಅವರಿಗೆ ಸರ್ವ ಯಶಸ್ಸನ್ನು ಕೋರುತ್ತೇನೆ.

೪ ಕಳೆದ ನಾಲ್ಕು ವರ್ಷಗಳ ಕಾಲ ನಿರಂತರವಾಗಿ ಕಾಡಿದ ಬರಗಾಲದಿಂದ ಬಳಲಿದ್ದ ರಾಜ್ಯದ ಆರ್ಥಿಕ ಸ್ಥಿತಿ ಈಗ ಚೇತರಿಸಿಕೊಳ್ಳುತ್ತಿದೆ. ಪ್ರಸಕ್ತ ವರ್ಷ ಕೃಷಿ ಮತ್ತು ಔದ್ಯಮಿಕ ವಲಯಗಳೆರಡರಲ್ಲೂ ಗಣನೀಯ ಬೆಳವಣಿಗೆ ಆಗಿದೆ, ಮೂಲಭೂತ ವಲಯಗಳಾದ ನೀರಾವರಿ, ವಿದ್ಯುತ್ ಸಾರಿಗೆ ಹಾಗೂ ಗ್ರಾಮೀಣ ಅಭಿವೃದ್ಧಿ ವಲಯಗಳಲ್ಲಿನ ಪ್ರಗತಿ ತೃಪ್ತಿಕರವಾಗಿದೆ.

೫ ಈಗಿನ ಬೆಲೆ ದರಗಳಲ್ಲಿ ರಾಜ್ಯದ ಆದಾಯವು ಶೇಕಡಾ ೧೭ಕ್ಕಿಂತ ಸ್ವಲ್ಪ ಹೆಚ್ಚು ಮತ್ತು ೧೯೭೦-೭೧ ರ (ಸ್ಥಿರ) ದರಗಳಲ್ಲಿ ಶೇಕಡಾ ೮.೮೫ರಷ್ಟು ಏರುವ ನಿರೀಕ್ಷೆ ಇದೆ ಸಾರ್ವಜನಿಕ ಮತ್ತು ಖಾಸಗಿ ಬಂಡವಾಳ ಹೂಡಿಕೆಯು ಶೇಕಡಾ ೧೨ರಷ್ಟು ಏರುವ ನಿರೀಕ್ಷೆ ಇದೆ ನೇರ ನಿಯೋಜನೆ ಕಾರ್ಯಕ್ರಮಗಳ ಮೂಲಕ ೩೦೦ ಲಕ್ಷ ಕೆಲಸದ ದಿನಗಳನ್ನು ಸೃಜಿಸಲಾಗಿದೆ. ಇಡೀ ಯೋಜನಾವಧಿಯಲ್ಲಿ ಅಂದಾಜಿನಂತೆ ಸೃಜಿಸಲಾಗುವ ಉದ್ಯೋಗವು ೧,೦೫೬ ಲಕ್ಷ ಕೆಲಸದ ದಿನಗಳು ಹೀಗಿದ್ದರೂ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಮಾತ್ರ ಏರುತ್ತಲೇ ಇದೆ.

೬ ಇಡೀ ರಾಷ್ಟ್ರಕ್ಕೆ ಹೋಲಿಸಿದಲ್ಲಿ ಕರ್ನಾಟಕದಲ್ಲಿ ಹಣದುಬ್ಬರ ಕಡಿಮೆ ೧೯೮೬-೮೭ರಲ್ಲಿ ನವೆಂಬರ್‌ವರೆಗೂ ಕೃಷಿ ಸಾಮಗ್ರಿಗಳ ಸಗಟು ಬೆಲೆಯಲ್ಲಿ ಕೇವಲ ಶೇಕಡಾ ೩.೮ರಷ್ಟು ಏರಿಕೆ ಕಂಡು ಬಂದಿದೆ. ಇಡೀ ರಾಷ್ಟ್ರದಲ್ಲೇ ಗ್ರಾಹಕ ಬೆಲೆ ಶೇಕಡಾ ೭.೪ರಷ್ಟು ಏರಿದ್ದರೆ ರಾಜ್ಯದಲ್ಲಿ ಈ ಏರಿಕೆ ಶೇಕಡಾ ೬.೧ರಷ್ಟು ಮಾತ್ರ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಪರಿಣಾಮಕಾರಿಯಾಗುವಂತೆ ಮಾಡಿರುವುದು ಹಾಗೂ ಜನತೆಯ ದುರ್ಬಲ ವರ್ಗಗಳಿಗೆ ಅತ್ಯಾವಶ್ಯಕ ಸಾಮಗ್ರಿಗಳು ಅಗ್ಗದ ದರದಲ್ಲಿ ದೊರೆಯುವಂತೆ ಮಾಡಿರುವುದೇ ಇದಕ್ಕೆ ಮುಖ್ಯ ಕಾರಣ.

೭ ಹಿಂದಿನ ವರ್ಷದಲ್ಲಿ ೫೬ ಲಕ್ಷ ಟನ್ ಆಹಾರ ಉತ್ಪಾದನೆಯಾಗಿತ್ತು ಈ ವರ್ಷ ಆಹಾರ ಉತ್ಪಾದನೆಯು ೭೨ ಲಕ್ಷ ಟನ್ನುಗಳನ್ನು ಮುಟ್ಟುವ ನಿರೀಕ್ಷೆ ಇದೆ. ಸಾಕಷ್ಟು ನೀರಾವರಿ ದೊರೆಯದಿದ್ದ ಕಾರಣ ಕಬ್ಬು, ಹತ್ತಿ ಮತ್ತು ತಂಬಾಕುಗಳಂತಹ ವಾಣಿಜ್ಯ ಬೆಳೆಗಳ ಉತ್ಪಾದನೆ ಸ್ವಲ್ಪಮಟ್ಟಿಗೆ ಕುಂಠಿತವಾಗಿವೆ. ಔದ್ಯಮಿಕ ಚಟುವಟಿಕೆಗಳು ನಿಯತಗತಿಯಲ್ಲಿ ಬೆಳೆಯುತ್ತಿವೆ ಮತ್ತು ೧೯೮೬-೮೭ರಲ್ಲಿ ೧೧ ೦೦೦ ಹೊಸ ಸಣ್ಣ ಘಟಕಗಳು ಸ್ಥಾಪನೆಯಾಗಿವೆ.

೮ ಪ್ರಸಕ್ತ ವರ್ಷ ೯೦,೦೦೦ ಹೆಕ್ಟೇರುಗಳಿಗೂ ಮೀರಿ ನೀರಾವರಿ ಸಾಮರ್ಥ್ಯವನ್ನು ಹೊಸದಾಗಿ ಉಂಟು ಮಾಡಲಾಗುವುದು. ಇದರಲ್ಲಿ ೬೧,೦೦೦ ಹೆಕ್ಟೇರುಗಳನ್ನು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೂಲಕ ಉಂಟು ಮಾಡಲಾಗುವುದು. ಸೃಜಿಸಿರುವ ಸಾಮರ್ಥ್ಯದಲ್ಲಿನ ಸುಮಾರು ೫೦.೨೦೦ ಹೆಕ್ಟೇರುಗಳನ್ನು ಮಾರ್ಚ್ ಅಂತ್ಯದೊಳಗೆ ಬಳಸಿಕೊಳ್ಳಲಾಗುವುದು ಕಳೆದ ವರ್ಷದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಇಳಿತ ಉಂಟಾಗಿತ್ತು. ಇದಕ್ಕೆ ಪ್ರತಿಯಾಗಿ ಈ ವರ್ಷ ಸುಮಾರು ಶೇಕಡಾ ೭ರಷ್ಟು ಹೆಚ್ಚಳ ಉಂಟಾಗುವ ನಿರೀಕ್ಷೆ ಇದೆ. ಇದುವರೆಗೆ ರಾಜ್ಯದಲ್ಲಿರುವ ಶೇಕಡಾ ೯೪ರಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. ಈ ವರ್ಷದಲ್ಲಿ ೧೦೦೦ ಗ್ರಾಮಗಳಿಗಿಂತಲೂ ಹೆಚ್ಚಿನ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲಾಗುವುದು ಮತ್ತು ೪೦,೦೦೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಒದಗಿಸಲಾಗುವುದು. ಮಾರ್ಚ್ ೧೯೮೮ರ ಕೊನೆಯ ವೇಳೆಗೆ ರಾಜ್ಯದ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಒದಗಿಸಲು ಉದ್ದೇಶಿಸಿದ್ದೇವೆ. ೨೦ ಅಂಶಗಳ ಕಾರ್ಯಕ್ರಮದ ಈ ಅನುಷ್ಠಾನದಲ್ಲಿ ರಾಜ್ಯವು ಅತ್ಯುತ್ತಮ ಕಾರ್ಯ ನಿರ್ವಹಿಸಿದೆ.

೯ ಮಳೆಯನ್ನೇ ಅವಲಂಬಿಸಿದ ಕಾರಣದಿಂದಾಗಿ ವ್ಯವಸಾಯದಲ್ಲಿ ಅಸ್ಥಿರತೆ ವಿದ್ಯುಚ್ಛಕ್ತಿ ವಲಯದಲ್ಲಿ ಅಸಮತೋಲನ ನೀರಾವರಿ ಸಾಮರ್ಥ್ಯ ಮತ್ತು ಬಳಕೆ ಇವೆರಡರ ನಡುವಿನ ಅಂತರ ಕೈಗಾರಿಕೆಗಳಲ್ಲಿ ಕಡಿಮೆ ಉತ್ಪಾದಕತೆ ಮತ್ತು ರೋಗಗ್ರಸ್ತ ಸ್ಥಿತಿ, ಪ್ರಾದೇಶಿಕ ಮತ್ತು ರಚನಾತ್ಮಕ ಅಸಮತೆ ಮುಂತಾದುವುಗಳಿಂದಾಗಿ ಅರ್ಥ ವ್ಯವಸ್ಥೆಯಲ್ಲಿ ಚಿಂತಾಜನಕ ದುರ್ಬಲ ಅಂಶಗಳು ಇನ್ನೂ ಇವೆ. ಈ ದೌರ್ಬಲ್ಯಗಳನ್ನು ತೊಡೆದು ಹಾಕಲು ಅವಶ್ಯವಾದಂಥ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ನಾವು ದೃಢ ನಿಶ್ಚಯ ಮಾಡಿದ್ದೇವೆ,

೧೦. ನಿರಂತರ ನಾಲ್ಕು ವರ್ಷಗಳ ತೀವ್ರ ಬರಗಾಲವು ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಅಹಿತಕರ ಪರಿಣಾಮವನ್ನು ಉಂಟು ಮಾಡಿತು. ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿ ಉಂಟಾದ ನಷ್ಟವನ್ನು ಅತ್ಯಂತ ಸ್ಥೂಲವಾಗಿ ಈ ಮುಂದಿನಂತೆ ಅಂದಾಜು ಮಾಡಲಾಗಿದೆ.

ಉತ್ಪಾದನೆಯಲ್ಲಿ ನಷ್ಟ	(ಕೋಟಿ ರೂಪಾಯಿಗಳಲ್ಲಿ)
(ಎ) ಕೃಷಿ ಉತ್ಪಾದನೆ	೧೧೯೮
(ಬಿ) ಕೈಗಾರಿಕಾ ಉತ್ಪಾದನೆ	೧೬೧೫
ಒಟ್ಟು	೨೮೦೩

ರಾಜಸ್ವ ನಷ್ಟ	
(ಎ) ವಿದ್ಯುಚ್ಛಕ್ತಿ ಮೇಲಿನ ಸುಂಕ	೨೧೫
(ಬಿ) ರಾಜ್ಯ ತೆರಿಗೆಗಳು	೨೩೩
ಒಟ್ಟು	೪೪೮

ಇದಲ್ಲದೆ ಸರ್ಕಾರವು ಬರ ಪರಿಹಾರ ಕಾಮಗಾರಿಗಳಿಗಾಗಿ ರೂ. ೫೩೧ ಕೋಟಿ ಖರ್ಚು ಮಾಡಬೇಕಾಯಿತು.

೧೧. ಜನತಾ ಸರ್ಕಾರವು ೧೯೮೩ರಲ್ಲಿ ಅಧಿಕಾರಕ್ಕೆ ಬಂದ ನಂತರ ಇದು ನನ್ನ ಐದನೆಯ ಬಜೆಟ್. ನನ್ನ ಬಜೆಟ್ ಭಾಷಣಗಳಲ್ಲಿ ಅನೇಕ ಪ್ರಮುಖ ಹೇಳಿಕೆಗಳನ್ನು ನೀಡಿದ್ದೇನೆ. ಈ ಹೇಳಿಕೆಗಳನ್ನು ಮತ್ತು ಅವುಗಳ ಕಾರ್ಯಾಚರಣೆಗೆ ಕೈಗೊಂಡ ಕ್ರಮಗಳನ್ನು ಅನುಬಂಧ Iರಲ್ಲಿ ಕೊಡಲಾಗಿದೆ.

೧೨. ಅನೇಕ ಪ್ರಮುಖ ಪ್ರಸ್ತಾವಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿವೆ. ಈ ಯೋಜನೆಗಳ ಮತ್ತು ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ IIರಲ್ಲಿ ಕೊಡಲಾಗಿದೆ.

೧೩. ಈ ಮೊದಲೇ ಹೇಳಿದಂತೆ ಕಳೆದ ನಾಲ್ಕು ವರ್ಷಗಳಲ್ಲಿ ಬರ ಪರಿಹಾರದ ಬಗ್ಗೆ ಮಾಡಲಾದ ಹೆಚ್ಚಿನ ವೆಚ್ಚದಂಥ ಬಾಹ್ಯ ಕಾರಣಗಳಿಂದ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬಿದ್ದಿತು ಇದಲ್ಲದೆ ಯೋಜನೆಗಾಗಿ ಕೇಂದ್ರ ಸಹಾಯದಲ್ಲಿಯೂ ಇಳಿತ ಉಂಟಾಗಿದೆ. ನಮ್ಮ ಅರ್ಥ ವ್ಯವಸ್ಥೆ ಎದುರಿಸುತ್ತಿರುವ ಕೆಲವು ವಿಶಿಷ್ಟ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುವ ಮೊದಲು ರಾಷ್ಟ್ರೀಯ ಅರ್ಥ ವ್ಯವಸ್ಥೆಯತ್ತ ಸ್ಥೂಲ ನೋಟ ಬೀರುವುದು ಅವಶ್ಯವಾಗಿದೆ. ಏಕೆಂದರೆ ರಾಷ್ಟ್ರೀಯ ಅರ್ಥ ವ್ಯವಸ್ಥೆಯ ಸ್ಥಿತಿಯು ಬಹು ಮಟ್ಟಿಗೆ ರಾಜ್ಯದ ಅರ್ಥ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತದೆ. ಹಣದುಬ್ಬರವು ಬೆಳವಣಿಗೆಯನ್ನು ನಿಷ್ಪರಿಣಾಮಗೊಳಿಸುವ ಮತ್ತು ಯೋಜನಾ ಕಾರ್ಯ ವಿಧಾನವನ್ನೇ ಕುಂಠಿತಗೊಳಿಸುವ ಒಂದು ಅಂಶವಾಗಿದೆ.

೧೪. ಆರನೇ ಯೋಜನೆಗೆ ಹಣ ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು ೧೧,೦೦೦ ಕೋಟಿ ರೂಪಾಯಿಯನ್ನು ಕೊರತೆ ಹಣಕಾಸಾಗಿ ತೋರಿಸಬೇಕಾಯಿತು. ರಾಜ್ಯದ ಆರನೇ ಯೋಜನಾ ಬಂಡವಾಳ ವೆಚ್ಚವು ಮೊದಲು ಅನುಮೋದಿಸಿದ ೨,೨೬೫ ಕೋಟಿ ರೂಪಾಯಿ ಬಂಡವಾಳ ವೆಚ್ಚಕ್ಕೆ ಪ್ರತಿಯಾಗಿ ೨,೬೨೫ ಕೋಟಿ ರೂಪಾಯಿ ಆಗಿದೆ. ಅಧಿಕೃತವಾಗಿ ಒಪ್ಪಿಕೊಂಡಿದ್ದ ೪೫೭.೭೧ ಕೋಟಿ ರೂಪಾಯಿಗೆ ಪ್ರತಿಯಾಗಿ ಯೋಜನೆಗೆ ನಿಧಿಗಳನ್ನು ಒದಗಿಸಲು ರಾಜ್ಯ ಸರ್ಕಾರ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಯ ಮೂಲಕ ೭೫೪.೮೩ ಕೋಟಿ ರೂಪಾಯಿ ಸಂಗ್ರಹಿಸಬೇಕಾಯಿತು.

೧೫. ರಾಜ್ಯ ಸರ್ಕಾರವು ಎದುರಿಸುತ್ತಿರುವ ವಿಶಿಷ್ಟ ಸಮಸ್ಯೆಗಳು ಈ ಮುಂದಿನಂತಿವೆ.

ಎ) ಗಾಡ್ಗಿಲ್ ಸೂತ್ರದ ಮೇರೆಗಿನ ಯೋಜನಾ ನೆರವಿನಲ್ಲಿ ಶೇಕಡಾ ೨೭ರ ಪಾಲಿನಷ್ಟು ನಮಗೆ ಸಿಗಲಿಲ್ಲ. ಏಕೆಂದರೆ ನಮ್ಮ ತಲಾವಾರು ಆದಾಯವು ರಾಷ್ಟ್ರೀಯ ಸರಾಸರಿಗಿಂತ ನೆಪ ಮಾತ್ರಕ್ಕೆ ಹೆಚ್ಚಿಗೆ ಇದೆ.

ಬಿ) ರಾಜ್ಯಕ್ಕೆ ನಾವು ಮಾತ್ರ ರಾಜಸ್ವ ಮಿಗಿತಾಯವಿದೆಯೆಂಬ ಕಾರಣಕ್ಕಾಗಿ ಸಂವಿಧಾನದ ೨೭೫ನೇ ಅನುಚ್ಛೇದದ ಮೇರೆಗೆ ನಮಗೆ ಅನುದಾನವೂ ದೊರೆಯಲಿಲ್ಲ.

ಸಿ) ವಿತ್ತ ಆಯೋಗದ ಶಿಫಾರಸ್ಸುಗಳೂ ನಮಗೆ ಪ್ರತಿಕೂಲವಾಗಿದ್ದರಿಂದ ಕೇಂದ್ರದಿಂದ ಸಂಪನ್ಮೂಲಗಳ ವರ್ಗಾವಣೆಯೂ ಕಡಿಮೆಯಾಯಿತು. ಏಳನೇ ವಿತ್ತ ಆಯೋಗದ ಶಿಫಾರಸಿನಂತೆಸಂವಿಧಾನದ ೨೭೫ನೇ ಅನುಚ್ಛೇದದ ಮೇರೆಗೆ ತೆರಿಗೆಗಳ ಶುಲ್ಕಗಳ ಮತ್ತು ಅನುದಾನದ ರೂಪದಲ್ಲಿ ಕರ್ನಾಟಕದ ಪಾಲು ಒಟ್ಟು ವರ್ಗಾವಣೆಗಳ ಶೇಕಡಾ ೪.೮೨ ರಷ್ಟಾಗಿದ್ದರೆ ಈಗ ಎಂಟನೇ ವಿತ್ತ ಆಯೋಗದ ಶಿಫಾರಸುಗಳಿಂದಾಗಿ ಶೇಕಡಾ ೪.೩೮ ರಷ್ಟಕ್ಕೆ ಇಳಿದಿದೆ, ಮತ್ತು

ಡಿ) ಆರನೇ ಯೋಜನೆಯಲ್ಲಿ ಕರ್ನಾಟಕಕ್ಕಾಗಿ ತಲಾವಾರು ಕೇಂದ್ರ ಸಹಾಯವು ೧೬೩ ರೂಪಾಯಿ ಆಗಿದ್ದರೆ ಎಲ್ಲ ರಾಜ್ಯಗಳಿಗಾಗಿರುವ ಸಹಾಯ ೨೭೮ ರೂಪಾಯಿಗಳು. ಇದೇ ರೀತಿ ೧೯೮೫–೮೬ರಲ್ಲಿ ಎಲ್ಲ ರಾಜ್ಯಗಳಿಗೆ ನೀಡಿದ ೮೧ ರೂಪಾಯಿಯ ತಲಾವಾರು ಯೋಜನಾ ನೆರವಿಗೆ ಪ್ರತಿಯಾಗಿ ಕರ್ನಾಟಕದ ಪಾಲಿಗೆ ಕೇವಲ ೬೫ ರೂಪಾಯಿ ಮಾತ್ರ ಬಂದಿದೆ.

೧೬. ಕೇಂದ್ರದಿಂದ ರಾಜ್ಯಗಳಿಗೆ ಬಜೆಟ್ ಮೂಲಕ ಹಣ ವರ್ಗಾಯಿಸುವ ವಿಷಯವನ್ನು ಈಗ ಇಡಿಯಾಗಿ ಗಮನಿಸೋಣ. ಕೇಂದ್ರ–ರಾಜ್ಯ ಹಣಕಾಸು ವರ್ಗಾವಣೆಗಳು ಮೂರು ರೀತಿಯವು.

ಎ) ವಿತ್ತ ಆಯೋಗದ ಶಿಫಾರಸ್ಸುಗಳ ಪ್ರಕಾರ ಜಾರಿಗೊಳಿಸಲಾಗುವ ಶಾಸನಬದ್ಧ ವರ್ಗಾವಣೆಗಳು.

ಬಿ) ಯೋಜನಾ ಆಯೋಗದಿಂದ ಜಾರಿಗೊಳಿಸಲಾಗುವ ಯೋಜನಾ ವರ್ಗಾವಣೆಗಳು, ಮತ್ತು

ಸಿ) ಬಹುಮಟ್ಟಿಗೆ ಕೇಂದ್ರದ ವಿವೇಚನಾಧೀನವಾಗಿ ನಡೆಯುವ ಯೋಜನೇತರ ಶಾಸನೇತರ ವರ್ಗಾವಣೆಗಳು.

೧೭. ಅನುಬಂಧ-III, ೧೯೫೧–೮೫ರ ಅವಧಿಯಲ್ಲಿ ಮಾಡಲಾದ ಸಂಪನ್ಮೂಲದ ವರ್ಗಾವಣೆಯನ್ನು (ವಿವಿಧ ಏಜೆನ್ಸಿಗಳ ಮೂಲಕ ಒಟ್ಟು) ತೋರಿಸುತ್ತದೆ. ಮೂರು ಯೋಜನಾ ಅವಧಿಗಳಲ್ಲಿ (ಮೊದಲನೇ, ನಾಲ್ಕನೇ ಮತ್ತು ೧೯೬೬–೬೯ರ ವಾರ್ಷಿಕ ಯೋಜನಾ ಅವಧಿಯಲ್ಲಿ) ನಡೆದ ವಿವೇಚನಾಧೀನ ವರ್ಗಾವಣೆಗಳು ಶಾಸನಬದ್ಧ ಮತ್ತು ಯೋಜನಾ ವರ್ಗಾವಣೆಗಳಿಗಿಂತ ಹೆಚ್ಚಾಗಿವೆ. ೫ನೇ ಯೋಜನೆಯಲ್ಲಿ ವಿವೇಚನಾಧೀನ ವರ್ಗಾವಣೆಗಳ ಪ್ರಮಾಣ ಕಡಿಮೆಯಾಗಿತ್ತು. ಆದರೆ ೬ನೇ ಯೋಜನೆಯಲ್ಲಿ ಇದು ಪುನಃ ಯೋಜನಾ ವರ್ಗಾವಣೆಗಳನ್ನೂ ಮೀರಿಸಿದೆ.

೧೮. ಇತ್ತೀಚೆಗಿನ ಲೇಖನವೊಂದರಲ್ಲಿ ಸೂಕ್ತವಾಗಿ ವಿವರಿಸಿರುವಂತೆ ''ಈ ಸೂತ್ರಬದ್ಧವಲ್ಲದ ವರ್ಗಾವಣೆಗಳು ಶಾಸನಬದ್ಧ ವರ್ಗಾವಣೆ ಮತ್ತು ಯೋಜನಾ ವರ್ಗಾವಣೆಗಳಂತಲ್ಲ. ಇವು ಆಕ್ಷೇಪಾರ್ಹವಾದುವು. ಏಕೆಂದರೆ ಇವುಗಳು ರಾಜಕೀಯ ಪಕ್ಷಪಾತತನ ಮತ್ತು ಅನೀತಿ ಆಮಿಷಗಳಿಗೆ ಎಡೆ ಕೊಡುತ್ತವೆ ವಿವೇಚನಾಧೀನವಾಗಿ ವರ್ಗಾವಣೆ ಮಾಡುವ ಪದ್ಧತಿ ಇನ್ನೂ ಉಳಿದುಕೊಂಡು ಬಂದಿದ್ದರೆ ಕೇಂದ್ರವು ತನ್ನ ವಿವೇಚನಾಧೀನ ನಿಯಂತ್ರಣಕೊಳಪಟ್ಟು ವರ್ಗಾಯಿಸುವುದಕ್ಕಾಗಿ ಸಂಪನ್ಮೂಲಗಳ ಪ್ರಮುಖ ಭಾಗವೊಂದನ್ನು ತನ್ನಲ್ಲೇ ಉಳಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ ಎಂದು ವ್ಯಾಖ್ಯಾನಿಸದೆ ಗತ್ಯಂತರವಿಲ್ಲ.''

೧೯. ಅನುಬಂಧ IV ೧೯೫೬–೧೯೮೪ರ ಅವಧಿಯಲ್ಲಿ ಮಾಡಲಾದ ವಿವೇಚನಾಧೀನ ವರ್ಗಾವಣೆಗಳ ವಿವರವನ್ನು ತೋರಿಸುತ್ತದೆ. ಈ ವಿವೇಚನಾಧೀನ ವರ್ಗಾವಣೆಗಳು ಅಪೇಕ್ಷಣೀಯವಲ್ಲ. ಏಕೆಂದರೆ,

ಎ) ಕೇಂದ್ರ ತಯಾರಿಸಿದ ಯೋಜನೆಗಳು ರಾಜ್ಯಗಳಲ್ಲಿನ ಸ್ಥಿತಿಗತಿಗಳಿಗೆ ಸುಸಂಗತವಾಗಿರಲಿ, ಇಲ್ಲದಿರಲಿ ಅವುಗಳನ್ನು ಬಹುತೇಕವಾಗಿ ರಾಜ್ಯ ಸರ್ಕಾರದ ಮೇಲೆ ಹೇರಲಾಗುತ್ತದೆ.

ಬಿ) ರಾಜ್ಯಗಳಿಗೆ ಯೋಜನಾ ನೆರವು ನೀಡಲು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಅಳವಡಿಸಿಕೊಂಡಿರುವ ಮಾನದಂಡಗಳನ್ನು ಈ ವರ್ಗಾವಣೆಗಳು ತುಚ್ಛೀಕರಿಸುತ್ತವೆ,

ಸಿ) ಈ ವರ್ಗಾವಣೆಗಳು ಗಾಡ್ಗಿಲ್ ಸೂತ್ರದ ಮೇರೆಗೆ ಯೋಜನಾ ನಿಧಿಗಳನ್ನು ವಿತರಣೆ ಮಾಡುವ ಮೂಲತತ್ವಕ್ಕೆ ಅಪಾಯವುಂಟು ಮಾಡುತ್ತವೆ ಮತ್ತು

ಡಿ) ಈ ವರ್ಗಾವಣೆಗಳಿಗೆ ಅಳವಡಿಸಿಕೊಂಡಿರುವ ಮಾನದಂಡಗಳು ಹಣಕಾಸು ಆಯೋಗಗಳಿಂದ ತಿರಸ್ಕೃತವಾದವುಗಳಾಗಿವೆ.

೨೦. ಕೇಂದ್ರವು ವಿವೇಚನಾಧೀನವಾಗಿ ಸಂಪನ್ಮೂಲಗಳು ಮಾಡುವ ಪದ್ಧತಿಯು ಹೆಚ್ಚುತ್ತಿರುವುದರಿಂದ ದೋಷಪೂರ್ಣ ವಿತರಣೆಯ ಸಮಸ್ಯೆ ಇನ್ನಷ್ಟು ತೀವ್ರಗೊಂಡಿದೆ ಎಂದು ೩೫ ವರ್ಷಗಳ ಅನುಭವದಿಂದ ಕಂಡು ಬಂದಿದೆ. ಇಂಥ ವಿವೇಚನಾಧೀನ ವರ್ಗಾವಣೆಗಳು, ಪರೋಕ್ಷ ಆರ್ಥಿಕ ಹಸ್ತಕ್ಷೇಪದ ಮೂಲಕ, ರಾಜ್ಯಗಳ ಸ್ವಾಯತ್ತತೆಯನ್ನು ಕುಗ್ಗಿಸುತ್ತದೆ.

೨೧. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ೭ನೇ ಯೋಜನೆಗೆ ಕೇಂದ್ರ ಹಣಕಾಸನ್ನು ಹೇಗೆ ಒದಗಿಸಲಾಗಿದೆ ಎಂಬುದನ್ನು ಪರಿಶೀಲಿಸಬೇಕು. ಸರ್ಕಾರಿ ವಲಯದ ಒಟ್ಟು ೧,೮೦,೦೦೦ ಕೋಟಿ ರೂಪಾಯಿಗಳ ವೆಚ್ಚಕ್ಕೆ ಹಣಕಾಸು ಒದಗಿಸುವಲ್ಲಿ ಯೋಜನಾ ಆಯೋಗವು ೧೪,೦೦೦ ಕೋಟಿ ರೂಪಾಯಿಗಳಷ್ಟು ಕೊರತೆ ಹಣಕಾಸಿನ ಏರ್ಪಾಡಿಗೆ ಅನುಮೋದನೆ ನೀಡಿದೆ. ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರದ ಏಳನೇ ಯೋಜನೆಯ ಮೂರನೇ ವರ್ಷವೇ ಕೊರತೆ ಹಣಕಾಸಿನ ಪ್ರಮಾಣ ಈ ಮಿತಿಯನ್ನು ಮೀರುವುದು. ಓವರ್ ಡ್ರಾಫ್ಟ್‌ಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನ ನಿಯಮಗಳನ್ನು ಕಠಿಣವಾಗಿ ಜಾರಿಗೊಳಿಸುತ್ತಿರುವುದರಿಂದ ಕೊರತೆ ಹಣಕಾಸಿನ ಈ ಹೆಚ್ಚಳಕ್ಕೆ ರಾಜ್ಯ ಸರ್ಕಾರಗಳನ್ನು ದೂರುವುದು ಸಾಧ್ಯವಿಲ್ಲ. ಕೇಂದ್ರದ ಯೋಜನೇತರ ವೆಚ್ಚದ ಮೇಲೆ ಕಡಿವಾಣ ಹಾಕದಿದ್ದರೆ ಕೊರತೆ ಹಣಕಾಸಿನ ಹೆಚ್ಚಳದಿಂದ ಹಣದುಬ್ಬರ ಇನ್ನಷ್ಟು ಹೆಚ್ಚಾಗಬಹುದು.

೨೨. ಕೇಂದ್ರ ಸರ್ಕಾರದ ಯೋಜನೇತರ ವೆಚ್ಚವು ಒಂದೇ ಸಮನೆ ಹೆಚ್ಚುತ್ತಿದೆ. ಇದು ೧೯೮೫–೮೬ರಲ್ಲಿ ೨೯,೨೬೧ ಕೋಟಿ ರೂಪಾಯಿಗಳಾಗಿತ್ತು. ಮತ್ತು ೧೯೮೬–೮೭ರಲ್ಲಿ ೩೧,೭೬೭ ಕೋಟಿ ರೂಪಾಯಿಗಳಾಗಿತ್ತು. ೧೯೮೭–೮೮ರಲ್ಲಿ ಇದು ೩೮,೪೫೦ ಕೋಟಿ ರೂಪಾಯಿಗಳಿಗೆ ಏರುವ ಅಂದಾಜಿದೆ. ೧೯೮೭–೮೮ರಲ್ಲಿ ಕೇಂದ್ರ ಸರ್ಕಾರದ ಯೋಜನೇತರ ವೆಚ್ಚವು ಬಹುಮಟ್ಟಿಗೆ ಬರುವ ವರ್ಷದ ೨೦,೭೩೨ ಕೋಟಿ ರೂಪಾಯಿಗಳ ಕೇಂದ್ರ ಯೋಜನಾ ಗಾತ್ರದ ಎರಡರಷ್ಟಾಗುತ್ತದೆ. ೧೯೮೫–೮೬ ಮತ್ತು ೧೯೮೬–೮೭ರಲ್ಲಿ ರಾಜ್ಯಗಳ ಯೋಜನೆಗಳಿಗೆ ದೊರೆತ ಕೇಂದ್ರದ ನೆರವು ಕ್ರಮವಾಗಿ ೬,೮೬೩ ಕೋಟಿ ರೂಪಾಯಿಗಳು ಮತ್ತು ೭,೩೨೮ ಕೋಟಿ ರೂಪಾಯಿಗಳು. ೧೯೮೭–೮೮ರಲ್ಲಿ ರಾಜ್ಯಗಳ ಯೋಜನೆಗಳಿಗೆ ದೊರಕಲಿರುವ ಕೇಂದ್ರದ ನೆರವು ೭,೯೦೦ ಕೋಟಿ ರೂಪಾಯಿಗಳಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ.

೨೩. ಕರ್ನಾಟಕದ ೭ನೇ ಯೋಜನಾ ವೆಚ್ಚವಾದ ೩,೫೨೦ ಕೋಟಿ ರೂಪಾಯಿಗಳಿಗೆ ನಾವು ೧೯೮೪–೮೫ರ ದರಗಳ ಪ್ರಕಾರ ೧,೫೦೬.೪೩ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಪನ್ಮೂಲಗಳನ್ನು ಶೇಖರಿಸಬೇಕಾಗಿದೆ. ಅದರಲ್ಲಿ ೧,೦೫೬ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಪನ್ಮೂಲಗಳನ್ನು ನಾವು ಈಗಾಗಲೇ ಸಂಗ್ರಹಿಸಿದ್ದೇವೆ. ಯೋಜನಾ ಆಯೋಗವು ಈ ಪ್ರಯತ್ನವನ್ನು ಮೆಚ್ಚಿದೆ.

೨೪. ಇತ್ತೀಚೆಗೆ ಕೇಂದ್ರ ಸರ್ಕಾರವು ಸಂಪನ್ಮೂಲಗಳ ಸಂಗ್ರಹಣೆಗಾಗಿ ಆಕರ್ಷಕ ಸವಲತ್ತುಗಳೊಂದಿಗೆ ಬಾಂಡುಗಳ ಮೇಲೆ ಹಣ ಎತ್ತಲು ಕೇಂದ್ರ ಸರ್ಕಾರದ ಔದ್ಯಮಿಕ ಸಂಸ್ಥೆಗಳಿಗೆ ಅನುಮತಿ ನೀಡುತ್ತಿದೆ. ಆದರೆ ಇದೇ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಔದ್ಯಮಿಕ ಸಂಸ್ಥೆಗಳಿಗೆ ಅನುಮತಿ

ನೀಡಲಾಗುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಇದು ಬಹಳ ಅನ್ಯಾಯ. ಇದರ ಪರಿಣಾಮವೆಂದರೆ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯ ಇರುವ ಸಂಪನ್ಮೂಲಗಳ ಲಭ್ಯತೆಯ ಮೇಲೆ ಇನ್ನಷ್ಟು ನಿರ್ಬಂಧ. ಈಗ ತಾನೇ ಪ್ರಕಟವಾಗಿರುವ ಆರ್ಥಿಕ ಸಮೀಕ್ಷೆಯು ಬಂಡವಾಳ ಮಾರುಕಟ್ಟೆಯಲ್ಲಿ ಆಗಿರುವ ವೃದ್ಧಿಯನ್ನು ಎತ್ತಿ ತೋರಿಸಿದೆ. ಇದರ ಪ್ರಯೋಜನವನ್ನು ಕೇಂದ್ರ ಮತ್ತು ರಾಜ್ಯಗಳು ಸಮಾನವಾಗಿಯೇ ಹಂಚಿಕೊಳ್ಳಬೇಕು.

೨೫. ಕೇಂದ್ರ ಸರ್ಕಾರದ ಯೋಜನೇತರ ವೆಚ್ಚ ಮತ್ತು ಕೊರತೆ ಹಣಕಾಸು ವ್ಯವಸ್ಥೆ ಏರುತ್ತಾ ಹೋದಂತೆ, ರಾಜ್ಯ ಸರ್ಕಾರವು ತನ್ನ ಯೋಜನಾ ವೆಚ್ಚಕ್ಕೆ ನೀಡಬೇಕಾದ ಸ್ವಂತ ಅಂಶದಾನವೂ ಗಣನೀಯವಾಗಿ ಏರುತ್ತಾ ಹೋಗುತ್ತದೆ ಎಂಬುದು ಮೇಲಿನ ಅಂಶದಿಂದಾಗಿ ವ್ಯಕ್ತವಾಗುತ್ತದೆ. ಎಲ್ಲಿಯವರೆಗೆ ಕೇಂದ್ರ ಸರ್ಕಾರವು ತನ್ನ ಯೋಜನೇತರ ವೆಚ್ಚದ ಬೆಳವಣಿಗೆಯನ್ನು ಮತ್ತು ಹಣ ದುಬ್ಬರದ ಗತಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೆ ನಾವು ಈ ವಿರೋಧಾಭಾಸ ಪರಿಸ್ಥಿತಿಯನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಏಕೆಂದರೆ ಮೇಲ್ನೋಟಕ್ಕೆ ಸಂಪನ್ಮೂಲಗಳ ವರ್ಗಾವಣೆಯ ಪ್ರಮಾಣ ಹೆಚ್ಚುತ್ತಿದ್ದರೂ ವಾಸ್ತವವಾಗಿ ಅದು ಇಳಿಮುಖವಾಗುತ್ತಿದೆ

೨೬. ಅನುಬಂಧ V ಅಖಿಲ ಭಾರತ ಬಂಡವಾಳ ಹೂಡಿಕೆಗೆ ಪ್ರತಿಯಾಗಿ ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರಿ ಉದ್ಯಮಗಳಲ್ಲಿ ಕೇಂದ್ರದ ನೇರ ಬಂಡವಾಳ ಹೂಡಿಕೆಯ ಬಗ್ಗೆ ಮಾಹಿತಿ ನೀಡುತ್ತದೆ ಕಳೆದ ಕೆಲವು ವರ್ಷಗಳಲ್ಲಿ, ಕರ್ನಾಟಕದಲ್ಲಿ ಕೇಂದ್ರದ ಬಂಡವಾಳ ಹೂಡಿಕೆ ಪ್ರಮಾಣವು ಇಳಿಮುಖವಾಗುತ್ತಿದೆ.

೨೭. ಶೂನ್ಯ ಬಜೆಟ್ಟಿನ ಮೇಲೆ ಅದರಲ್ಲೂ ಮುಖ್ಯವಾಗಿ ಯೋಜನೇತರಕ್ಕೆ ಸಂಬಂಧಿಸಿದಂತೆ ಕ್ರಮಗಳನ್ನು ನಾವು ಪೂರ್ಣಗೊಳಿಸಿದ್ದೇವೆ. ಬರುವ ವರ್ಷಕ್ಕೆ ೩೦ ಕೋಟಿ ರೂಪಾಯಿಗಳಷ್ಟು ಮಿತವ್ಯಯವನ್ನು ಸಾಧಿಸುವ ನಿರೀಕ್ಷೆಯಿದೆ.

೨೮. ಹಿಂದಿನ ನನ್ನ ಬಜೆಟ್ ಭಾಷಣದಲ್ಲಿ ರಾಜ್ಯದ ಗ್ರಾಮೀಣ ಸಾಲದ ಪೂರ್ಣ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ೧೫ ವರ್ಷಗಳ ಸಮಗ್ರ ಯೋಜನೆಯೊಂದನ್ನು ನಾನು ರೂಪಿಸಿದ್ದೆ. ಈ ಯೋಜನೆಯು ಗ್ರಾಮೀಣ ಜನತೆ, ರೈತರು, ಕುಶಲಕರ್ಮಿಗಳೇ ಮುಂತಾದವರನ್ನು ಸಾಲದ ಶಾಪದಿಂದ ವಿಮೋಚನೆಗೊಳಿಸುವ ಧ್ಯೇಯವನ್ನು ಹೊಂದಿದ್ದು. ಗ್ರಾಮೀಣ ಜನತೆಯ ಒಟ್ಟು ಸಾಲದ ಅವಶ್ಯಕತೆಗಳನ್ನು ಭರಿಸಲು ಉದ್ದೇಶಿಸಿತ್ತು. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ರಾಜ್ಯದ ಪ್ರತಿಯೊಂದು ತಾಲ್ಲೂಕಿನ ಒಂದು ಹೋಬಳಿಯಲ್ಲಿನ ಗ್ರಾಮೀಣ ಜನತೆಯ ಸಾಲದ ಅವಶ್ಯಕತೆಗಳನ್ನು ನಿರ್ಧರಿಸುವ ಸಲುವಾಗಿ ಗ್ರಾಮೀಣ ಸಾಲ ಸಮೀಕ್ಷೆಯೊಂದನ್ನು ಈಗಾಗಲೇ ಕೈಗೊಂಡಿದೆ. ಈ ಅಧ್ಯಯನವು ರಾಜ್ಯದ ಒಟ್ಟು ಜನಸಂಖ್ಯೆಯ ೧/೫ ಭಾಗವನ್ನು ಒಳಗೊಳ್ಳುತ್ತದೆ. ಈ ಕಾರ್ಯ ಇಡೀ ರಾಜ್ಯದಲ್ಲಿ ಐದು ವರ್ಷಗಳಲ್ಲಿ ಪೂರ್ಣಗೊಳ್ಳುತ್ತದೆ. ಈ ಯೋಜನೆಗೆ ನೆರವು ಕೋರಿ ಅದನ್ನು ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಕಳುಹಿಸಿಕೊಡಲಾಗುತ್ತಿದೆ.

೨೯. ನಮ್ಮ ಖುಷ್ಕಿ ಭೂಮಿ ಅಭಿವೃದ್ಧಿ ಕಾರ್ಯಕ್ರಮವು ಅದ್ಭುತ ಪರಿಣಾಮವನ್ನು ಉಂಟು ಮಾಡಿದೆ, ವಿಶ್ವ ಬ್ಯಾಂಕು ನೆರವಿನೊಂದಿಗೆ ಬೆಂಗಳೂರು ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವಂಥ ಕಾರ್ಯಕ್ರಮವೂ ಸೇರಿದಂತೆ ೧೯ ಖುಷ್ಕಿ ಭೂಮಿ ಅಭಿವೃದ್ಧಿ ಕಾರ್ಯಕ್ರಮಗಳು ನಮ್ಮ ರೈತರಲ್ಲಿ ಬಹಳಷ್ಟು ಆಸಕ್ತಿಯನ್ನು ಉಂಟು ಮಾಡಿದೆ. ವಿಶ್ವಬ್ಯಾಂಕಿನ ನೆರವಿನೊಂದಿಗೆ ಉತ್ತರ ಕರ್ನಾಟಕದಲ್ಲಿ ಮತ್ತೊಂದು ಜಲ ವಿಭಾಜಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲು ನಾವು ಉದ್ದೇಶಿಸಿದ್ದೇವೆ. ಸಾಮುದಾಯಿಕ ಮತ್ತು ಸರ್ಕಾರದ ಖಾಲಿ ಭೂಮಿಗಳು ಹಾಗೂ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸಲಾಗುತ್ತಿರುವ ಭೂಮಿಗಳನ್ನು ಉತ್ತಮವಾಗಿ ಮತ್ತು ಸೂಕ್ತವಾಗಿ ಕೃಷಿಯ ಉದ್ದೇಶಕ್ಕಾಗಿ ಬಳಸಿಕೊಳ್ಳುವ ಜಲ ವಿಭಾಜಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೋಟಗಾರಿಕೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ತೋಟಗಾರಿಕೆ ಅಭಿವೃದ್ಧಿಯು ಜಲವಿಭಾಜಕ ಪ್ರದೇಶದ ಜೀವಿ ಪರಿಸರವನ್ನು ಮತ್ತು ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನೆರವಾಗಬಲ್ಲದು.

೩೦. ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಅಂತಿಮವಾಗಿ ಅಳವಡಿಸಿಕೊಂಡಿರುವುದರಿಂದ ನನಗೆ ಸಂತೋಷವಾಗಿದೆ. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಲವಿಭಾಜಕ ಅಭಿವೃದ್ಧಿ ಕಾರ್ಯಕ್ರಮ

ವನ್ನು ೧೯೮೭–೯೨ರ ಅವಧಿಗಾಗಿ ಸಿದ್ಧಪಡಿಸಲಾಗಿದೆ. ಪ್ರತಿವರ್ಷವೂ ಈ ಯೋಜನೆಗಾಗಿ ಕನಿಷ್ಠ ಪಕ್ಷ ೯ ಕೋಟಿ ರೂಪಾಯಿ ಮೊತ್ತದ ಹಣವನ್ನು ವೆಚ್ಚ ಮಾಡುವ ನಿರೀಕ್ಷೆಯಿದೆ. ೧೯೮೭–೮೮ರ ಅವಧಿಯಲ್ಲಿ ಯೋಜನೆಯನ್ನು ೫೫ ತಾಲ್ಲೂಕುಗಳಲ್ಲಿನ ೫೦ ಆಯ್ದ ಜಲ ವಿಭಾಜಕ ಪ್ರದೇಶಗಳಲ್ಲಿ ಕಾರ್ಯಗತಗೊಳಿಸಲಾಗುವುದು. ಈ ಮೊದಲೇ ನಾನು ಹೇಳಿರುವಂಥ ಸಮಗ್ರ ಸಾಲದ ಸಮೀಕ್ಷೆಯನ್ನು ಈ ಆಯ್ದ ಜಲ ವಿಭಾಜಕ ಪ್ರದೇಶಗಳಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿ ಕಾರ್ಯಕ್ರಮದೊಂದಿಗೆ ಸಮನ್ವಯಗೊಳಿಸಲಾಗುವುದು. ಇದರಿಂದಾಗಿ ಗ್ರಾಮಗಳ ಪೂರ್ಣ ಮತ್ತು ಸಮಗ್ರ ಅಭಿವೃದ್ಧಿಯನ್ನು ವಾಸ್ತವವಾಗಿ ಸಾಧಿಸಿದಂತಾಗುತ್ತದೆ.

೩೧. ೧೯೮೭ ೮೮ನೇ ವರ್ಷವನ್ನು ವಿಶ್ವಸಂಸ್ಥೆಯು "ವಸತಿಹೀನರಿಗೆ ವಸತಿ ಒದಗಿಸುವ ಅಂತರಾಷ್ಟ್ರೀಯ ವರ್ಷ" ಎಂದು ಘೋಷಿಸಿದೆ. ಬೆಂಗಳೂರಿನ ಜ್ಞಾನ ಭಾರತಿಯಲ್ಲಿರುವ ಪ್ರಾದೇಶಿಕ ಗೃಹನಿರ್ಮಾಣ ಕೇಂದ್ರವು ಈ ಸಂಬಂಧದಲ್ಲಿ ಲಾಂಛನವೊಂದನ್ನು ಸಿದ್ಧಪಡಿಸಿದೆ. ಈ ಕಾರ್ಯಕ್ರಮದ ಅಂಗವಾಗಿ ೧೯೮೭–೮೮ರ ಅವಧಿಯಲ್ಲಿ ಕಾರ್ಯಗತಗೊಳಿಸಲಾಗುವ ಯೋಜನಾ ಕಾರ್ಯಕ್ರಮಗಳ ವಿವರಣೆಗಳನ್ನು ಅನುಬಂಧ VIರಲ್ಲಿ ಕೊಡಲಾಗಿದೆ. ಮುಂಬರುವ ವರ್ಷದಲ್ಲಿ ಜನತಾ ಗೃಹನಿರ್ಮಾಣ ಯೋಜನೆಯ ಮೇರೆಗೆ ಅಪೂರ್ಣವಾಗಿರುವ ಎಲ್ಲ ಮನೆಗಳನ್ನು ಪೂರ್ಣಗೊಳಿಸಲು ನಾವು ಉದ್ದೇಶಿಸಿದ್ದೇವೆ.

೩೨. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೩ರಿಂದೀಚೆಗೆ ನಿವೇಶನಗಳ ಹಂಚಿಕೆಯಲ್ಲಿ ಗಮನಾರ್ಹವಾದ ಕಾರ್ಯ ಸಾಧಿಸಿದೆ. ಅನುಬಂಧ VIIರಲ್ಲಿ ೧೯೭೯ ರಿಂದ ಪ್ರತಿ ವರ್ಷವೂ ಹಂಚಲಾದ ನಿವೇಶನಗಳ ಸಂಖ್ಯೆಯನ್ನು ಕೊಡಲಾಗಿದೆ. ೧೯೭೯–೮೨ ಈ ನಾಲ್ಕು ವರ್ಷಗಳಲ್ಲಿ ೩,೧೫೪ ನಿವೇಶನಗಳು ಮಾತ್ರ ಹಂಚಲ್ಪಟ್ಟಿದ್ದರೆ ೧೯೮೩–೮೬ ಈ ನಾಲ್ಕು ವರ್ಷಗಳಲ್ಲಿ ೧೧,೬೮೫ ನಿವೇಶನಗಳು ಹಂಚಲ್ಪಟ್ಟಿವೆ. ಪ್ರಾಧಿಕಾರವು. ೧೯೮೭–೮೮ರ ಅವಧಿಯಲ್ಲಿ ೨೭ ೧೦೦ ನಿವೇಶನಗಳನ್ನು ಹಂಚುವ ಕಾರ್ಯಕ್ರಮದ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಅಂತೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೭೯–೮೨ರ ಅವಧಿಯಲ್ಲಿ ೧,೮೩೩ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೆ, ೧೯೮೩–೮೬ರ ಅವಧಿಯಲ್ಲಿ ೨,೮೮೯ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ.

೩೩. ಕ್ರಿ.ಶ. ೨೦೦೦ದ ಹೊತ್ತಿಗೆ 'ಸರ್ವರಿಗೂ ಆರೋಗ್ಯ' ಎನ್ನುವ ಯೋಜನೆಯನ್ನು ಸಾಧಿಸುವುದಕ್ಕಾಗಿ ನಾವು ಆರೋಗ್ಯ ವಿಮಾ ಯೋಜನೆಯನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ದೇಶದಲ್ಲೇ ಪ್ರಥಮ ಬಾರಿಗೆ ಹಾಕಿಕೊಂಡಿದ್ದೇವೆ. ಅಲ್ಪ ಮಾಸಿಕ ಮಂತಿಗೆಯನ್ನು ಕೊಡುವ ಪ್ರತಿಯೊಬ್ಬ ನಾಗರೀಕನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯಲು ಅರ್ಹನಾಗುತ್ತಾನೆ. ಈ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರದಿಂದ ನಾವು ನೆರವು ಕೋರಲಿದ್ದೇವೆ.

೩೪. ೧೯೮೭–೮೮ನೇ ವರ್ಷಕ್ಕೆ ೮೭೦ ಕೋಟಿ ರೂಪಾಯಿಯನ್ನು ಯೋಜನಾ ವೆಚ್ಚವೆಂದು ನಿಗದಿಪಡಿಸಲಾಗಿದೆ. ಇದು ೧೯೮೬–೮೭ರ ಯೋಜನೆಗಿಂತ ೧೦೫ ಕೋಟಿ ರೂಪಾಯಿ ಹೆಚ್ಚಾಗಿದ್ದು ಈ ಹೆಚ್ಚಳವು ಶೇಕಡಾ ೧೪ರಷ್ಟು ಇದೆ. ಇದರ ಜೊತೆಗೆ ಕಾವೇರಿ ಕಣಿವೆ ಯೋಜನೆಗಾಗಿ ೧೧೦ ಕೋಟಿ ರೂಪಾಯಿ ಕೇಂದ್ರ ಯೋಜನಾ ಕಾರ್ಯಕ್ರಮಗಳಿಗಾಗಿ ೮೩.೦೫ ಕೋಟಿ ರೂಪಾಯಿ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ೧೨೦.೫೧ ಕೋಟಿ ರೂಪಾಯಿ ಮೊತ್ತವನ್ನು ನಾನು ಒದಗಿಸಿದ್ದೇನೆ. ಹೀಗೆ ೧೯೮೭–೮೮ನೇ ವರ್ಷಕ್ಕೆ ಒಟ್ಟು ಯೋಜನಾ ವೆಚ್ಚ ೧೧೭೩.೫೬ ಕೋಟಿ ರೂಪಾಯಿ ಆಗುವುದು. ವಿದ್ಯುಚ್ಛಕ್ತಿ. ನೀರಾವರಿ, ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ಹಾಗೂ ಸಾಮುದಾಯಿಕ ಸೇವೆಗಳಂಥ ಆದ್ಯತಾ ಕ್ಷೇತ್ರಗಳಲ್ಲಿನ ವೆಚ್ಚಗಳಿಗೆ ಸಾಕಷ್ಟು ಹೆಚ್ಚು ಹಣವನ್ನು ನಾವು ಒದಗಿಸಿದ್ದೇವೆ. ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಕನಿಷ್ಟ ಅಗತ್ಯತೆಗಳ ಕಾರ್ಯಕ್ರಮ ಮತ್ತು ವಿಶೇಷ ಘಟಕ ಯೋಜನೆ ಹಾಗೂ ಬುಡಕಟ್ಟು ಉಪಯೋಜನೆ ಇವುಗಳ ಬಗ್ಗೆಯೂ ನಾವು ಅಷ್ಟೇ ಪ್ರಧಾನತೆಯನ್ನು ಕೊಟ್ಟಿದ್ದೇವೆ, ಅನುಬಂಧ VIIIರಲ್ಲಿ ೧೯೮೬–೮೭ ಮತ್ತು ೧೯೮೭–೮೮ರ ವಾರ್ಷಿಕ ಯೋಜನಾ ವೆಚ್ಚದ ತುಲನಾತ್ಮಕ ಚಿತ್ರಣವನ್ನು ಕೊಡಲಾಗಿದೆ.

೩೫. ಯೋಜನಾ ಆಯೋಗದೊಂದಿಗೆ ಸಮಾಲೋಚಿಸಿ ೧೯೮೭–೮೮ನೇ ಸಾಲಿಗಾಗಿ ನಮ್ಮ ವಾರ್ಷಿಕ ಯೋಜನಾ ಗಾತ್ರವನ್ನು ೮೭೦ ಕೋಟಿ ರೂಪಾಯಿಗಳೆಂದು ನಿಗದಿಪಡಿಸಲಾಗಿತ್ತು. ಮುಂದಿನ ಹಣಕಾಸು ವರ್ಷದಲ್ಲಿ ಕಾವೇರಿ ಕಣಿವೆ ನೀರಾವರಿ ಯೋಜನೆಗಳಿಗಾಗಿ ೧೦೦ ಕೋಟಿ

ರೂಪಾಯಿಗಳನ್ನು ಹಾಗೂ ಕೃಷ್ಣಾ ಕಣಿವೆ ನೀರಾವರಿ ಯೋಜನೆಗಳಿಗಾಗಿ ೨೦೦ ಕೋಟಿ ರೂಪಾಯಿಗಳನ್ನು ಹಣ ಒದಗಿಸಲು ನಾವು ಬದ್ಧರಾಗಿದ್ದ ಕಾರಣ ಹಂಚಿಕೆಗಳಲ್ಲಿ ಕೆಲವೊಂದು ಹೊಂದಾಣಿಕೆಗಳ ಮೂಲಕ ಹಾಗೂ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಯ ಮೂಲಕ ಹೆಚ್ಚು ಹಣ ಯೋಜನಾ ಆಯೋಗದ ಅನುಮೋದನೆಯನ್ನು ನಿರೀಕ್ಷಿಸಿ ಒದಗಿಸಲು ನಾನು ತೀರ್ಮಾನಿಸಿದ್ದೇನೆ. ಹೀಗಾಗಿ ಯೋಜನಾ ವೆಚ್ಚವು ೯೧೭ ಕೋಟಿ ರೂಪಾಯಿಯಾಗಲಿದೆ. ನಮಗಿರುವ ಅನಿವಾರ್ಯತೆಯನ್ನು ಯೋಜನಾ ಆಯೋಗವು ಮನಗಂಡು ಈ ಹೆಚ್ಚಿನ ವೆಚ್ಚಕ್ಕೆ ಅನುಮೋದನೆ ನೀಡುತ್ತದೆಂಬ ಭರವಸೆ ನನಗಿದೆ. ಯೋಜನೆಯ ಪ್ರಗತಿಯನ್ನು ಆಧರಿಸಿ, ಕಾವೇರಿ ನೀರು ಸರಬರಾಜು ಯೋಜನೆ IIIನೇ ಹಂತದ ಮೇಲಿನ ವೆಚ್ಚದ ಏರ್ಪಾಡನ್ನು ಪುನರ್ ಹೊಂದಾಣಿಕೆಯ ಮೂಲಕ ಮೊದಲು ಯೋಜಿಸಿದ್ದಂತೆ ೨೮ ಕೋಟಿ ರೂಪಾಯಿಗಳಿಗೆ ಏರಿಸಲಾಗುವುದು. ನಾವು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುತ್ತೇವೆಂಬ ಭರವಸೆಯಿಂದ ಈ ಹೆಚ್ಚಿನ ವೆಚ್ಚಕ್ಕೆ ಬಜೆಟ್ಟಿನಲ್ಲಿ ಹಣ ಒದಗಿಸುತ್ತಿದ್ದೇವೆ. ನಾವು ಹಾಗೆ ಮಾಡಲು ಅಸಮರ್ಥರಾದರೆ, ಆ ಪ್ರಮಾಣಕ್ಕನುಗುಣವಾಗಿ ನಾವು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡುವುದು ಅನಿವಾರ್ಯವಾಗುತ್ತದೆ. ಈ ಸಂಬಂಧದಲ್ಲಿ ನಾನು ಮಾನ್ಯ ಸದಸ್ಯರ ಸಹಕಾರ ಮತ್ತು ಬೆಂಬಲವನ್ನು ಕೋರುತ್ತೇನೆ.

೩೬. ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳಿಗೆ ಗಣನೀಯ ಸಂಪನ್ಮೂಲಗಳನ್ನು ವರ್ಗಾವಣೆ ಮಾಡುವುದು ಈ ಬಜೆಟ್ ಮತ್ತು ಯೋಜನೆಯ ಪ್ರಮುಖ ಲಕ್ಷಣಗಳಲ್ಲೊಂದು ಘಟಕಗಳಿಗೆ ಯೋಜನೇತರ ಬಾಬಿನಲ್ಲಿ ೫೯೭.೪೨ ಕೋಟಿ ರೂಪಾಯಿಗಳ ಮೊತ್ತವನ್ನು ಹಾಗೂ ಯೋಜನೆಯ ಬಾಬಿನಲ್ಲಿ ೩೫೩.೪೯ ಕೋಟಿ ರೂಪಾಯಿಗಳನ್ನು ವರ್ಗಾವಣೆ ಮಾಡಲಾಗುವುದು. ಬಜೆಟ್ ದಾಖಲೆಗಳಲ್ಲಿ ಸಂಬಂಧಪಟ್ಟ ಪ್ರಮುಖ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಈ ಮೊಬಲಗುಗಳನ್ನು ಒಟ್ಟು ಮೊತ್ತವಾಗಿ ತೋರಿಸಲಾಗಿದೆ. ಈ ಮೊಬಲಗುಗಳನ್ನು ಖರ್ಚು ಮಾಡಬೇಕಾದ ಜಿಲ್ಲಾವಲಯ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧಿತ ದಾಖಲೆಯಲ್ಲಿ ಸೂಚಿಸಲಾಗಿದೆ.

೩೭. ನಾವು ಕಳೆದ ನಾಲ್ಕು ವರ್ಷಗಳಲ್ಲಿ ಬರ ಪರಿಹಾರಕ್ಕಾಗಿ ತುಂಬಾ ವೆಚ್ಚವನ್ನು ಮಾಡಿದ್ದೇವೆ ರೈತರಿಂದ ಬರಬೇಕಾಗಿದ್ದ ಸಾಲಗಳನ್ನು ಮನ್ನಾ ಮಾಡುವ ಮೂಲಕ ಸುಸ್ತಿ ಸಾಲಗಳ, ಚಾಲ್ತಿ ಸಾಲಗಳ, ಮಾರುಕಟ್ಟೆ ಸಾಲಗಳ ಮೇಲಿನ ಬಡ್ಡಿ ಸಹಾಯಧನ ನೀಡುವ ಮೂಲಕ, ನೀರು ಬಾರದ ಬಾವಿಗಳ ಬಗ್ಗೆ ಸಹಾಯಧನ ನೀಡುವ ಮೂಲಕ ಮತ್ತು ಕಡಿಮೆ ದರದಲ್ಲಿ ವಿದ್ಯುತ್ತು ಇತ್ಯಾದಿಗಳನ್ನು ಪೂರೈಸುವ ಮೂಲಕ ನಾವು ನಮ್ಮ ರೈತರಿಗೆ ಬಹಳಷ್ಟು ಪರಿಹಾರಗಳನ್ನು ನೀಡಿದ್ದೇವೆ, ಈ ರಿಯಾಯಿತಿಗಳಿಗಾಗಿ ರಾಜ್ಯ ಸರ್ಕಾರವು ೧೦೦ ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚವನ್ನು ಮಾಡಿದೆ. ಅಷ್ಟೇ ಅಲ್ಲದೆ, ನೀರಾವರಿ ವಲಯ, ಗ್ರಾಮೀಣ ವಿದ್ಯುದೀಕರಣ, ಸಮಾಜ ಕಲ್ಯಾಣ ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಲ್ಲಿ ಅಧಿಕ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸಲಾಗುತ್ತಿದೆ. ಆದರೆ ಶ್ರೀಮಂತ ರೈತರೂ ತೆರಿಗೆಗಳನ್ನು ಮತ್ತು ತಮ್ಮ ಚಾಲ್ತಿ ಸಾಲಗಳು ಮತ್ತು ಚಾಲ್ತಿ ಬಾಕಿಗಳನ್ನು ನಿರ್ದಿಷ್ಟ ಅವಧಿಯಲ್ಲಿ ಸಂದಾಯ ಮಾಡದಿರುವುದು ವಿಷಾದದ ಸಂಗತಿ. ಈ ಯೋಜನೆಗಳಿಗೆ ಕೇಂದ್ರ ಸರಕಾರದಿಂದ ಸಾಲಗಳ ಮೂಲಕ ಭಾಗಶಃ ಹಣ ಒದಗುತ್ತಿದ್ದು ಅವುಗಳನ್ನು ಮರುಸಂದಾಯ ಮಾಡಬೇಕಾಗುತ್ತದೆ. ಶ್ರೀಮಂತ ರೈತರು ಮತ್ತು ಈ ನೀರಾವರಿ ಯೋಜನೆಗಳ ಪ್ರಯೋಜನ ಪಡೆದವರು ಸಕಾಲದಲ್ಲಿ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಸಂದಾಯ ಮಾಡದಿದ್ದರೆ, ರಾಜ್ಯದ ಇತರ ಪ್ರದೇಶದಲ್ಲಿ ನೀರಾವರಿ ಯೋಜನೆಗಳಿಗೆ ಸರಕಾರವು ಹಣವನ್ನು ಒದಗಿಸುವುದು ಸಾಧ್ಯವಾಗದು. ಅದರಿಂದ ಆ ಪ್ರದೇಶದ ರೈತ ಬಾಂಧವರಿಗೆ ಅನ್ಯಾಯವಾಗುತ್ತದೆ.

೩೮. ಸಕಾಲದಲ್ಲಿ ನೀರಿನ ತೆರಿಗೆಯ ಮೇಲೆ ಉಪಕರವನ್ನು ವಿಧಿಸುತ್ತೇನೆಂದೂ ಈ ಉಪಕರದಿಂದ ಬರುವ ಆದಾಯವನ್ನು ಖುಷ್ಕಿ ಭೂಮಿ ಅಭಿವೃದ್ಧಿಗಾಗಿ ಬಳಸಲಾಗುವುದೆಂದೂ ನಾನು ನನ್ನ ಹಿಂದಿನ ವರ್ಷದ ಬಜೆಟ್ ಭಾಷಣದಲ್ಲಿ ಹೇಳಿದ್ದುದು ಮಾನ್ಯ ಸದಸ್ಯರಿಗೆ ನೆನಪಿರಬಹುದು. ೧-೭-೧೯೮೭ರಿಂದ ಪ್ರಾರಂಭವಾಗುವ ೧೯೮೭-೮೮ನೇ ರಾಜಸ್ವ ವರ್ಷದಿಂದ, ಈಗಿರುವ ನೀರಿನ ದರಗಳ ಮೇಲೆ ಶೇಕಡಾ ೫೦ರಷ್ಟು ಖುಷ್ಕಿ ಭೂಮಿ ಅಭಿವೃದ್ಧಿ ಉಪಕರವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ. ೧೯೮೭-೮೮ನೇ ರಾಜಸ್ವ ವರ್ಷದಿಂದ ನಿರ್ವಹಣಾ ಉಪಕರದ ಈಗಿರುವ ದರವನ್ನು ಎಕರೆಗೆ ೪ ರೂಪಾಯಿಯಿಂದ ೧೦ ರೂಪಾಯಿಗೆ ಏರಿಸಲು ಸಹ ಪ್ರಸ್ತಾವಿಸುತ್ತೇನೆ. ನಮ್ಮ ರಾಜ್ಯದಲ್ಲಿನ ನೀರಿನ ದರವು ದೇಶದಲ್ಲಿಯೇ ಅತ್ಯಂತ ಕಡಿಮೆ. ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರವು ತೆರಿಗೆಗಳ ಸಂಬಂಧ

ದಲ್ಲಿಯೂ ರೈತರಿಗೆ ಪರಿಹಾರಗಳನ್ನು ಮತ್ತು ರಿಯಾಯಿತಿಗಳನ್ನು ನೀಡಿದೆ, ರೈತರ ಹಿತದೃಷ್ಟಿಯಿಂದ ಮಾಡಲೇ ಬೇಕಾಗಿರುವ ಗ್ರಾಮೀಣ ವಲಯದಲ್ಲಿನ ಅಧಿಕ ಪ್ರಮಾಣದ ಹಣ ಹೂಡಿಕೆಯನ್ನು ಮುಂದು ವರಿಸಬೇಕಾದರೆ ಇಲ್ಲಿಯವರೆಗೆ ಬಂಡವಾಳ ಹೂಡಿಕೆಯಿಂದ ಪ್ರಯೋಜನ ಪಡೆದಿರುವ ರೈತರು ಸ್ವಲ್ಪ ಮಟ್ಟಿಗಾದರೂ ತ್ಯಾಗಮಾಡಲೇಬೇಕು, ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಯಲ್ಲಿ ಸಹಕರಿಸ ಬೇಕೆಂದು ನಮ್ಮ ರೈತರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

೩೯. ೧೯೮೭-೮೮ನೇ ಸಾಲಿಗಾಗಿ ವಿಶೇಷ ಘಟಕ ಯೋಜನೆಯು ೮೮,೪೪ ಕೋಟಿ ರೂಪಾಯಿ ಗಳಾಗಿದ್ದು, ಇದರಲ್ಲಿ ೨೪,೧೨ ಕೋಟಿ ರೂಪಾಯಿಗಳ ಮೊತ್ತವನ್ನು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ನಿರ್ದಿಷ್ಟ ಚಾಲ್ತಿ ಮತ್ತು ಹೊಸ ಯೋಜನೆಗಳಿಗೆ ಬಳಸಲಾಗುವುದು.

೪೦. ಸರ್ಕಾರವು, ಸರಕಾರೀ ಔದ್ಯಮಿಕ ವಲಯ ಮತ್ತು ಸಹಕಾರಿ ಔದ್ಯಮಿಕ ವಲಯ ಗಳೆರಡರಲ್ಲೂ ಗಣನೀಯ ಪ್ರಮಾಣದ ಬಂಡವಾಳವನ್ನು ಹೂಡಿದೆ. ದುರದೃಷ್ಟವಶಾತ್ ಈ ಬಂಡವಾಳ ಹೂಡಿಕೆಗಳಿಂದ ಬರುವ ಲಾಭ ಶೂನ್ಯ. ಸರಕಾರದ ಔದ್ಯಮಿಕ ವಲಯದಲ್ಲಿ ಮತ್ತು ಸಹಕಾರಿ ವಲಯದಲ್ಲಿ ಸರ್ಕಾರ ಹೂಡಿರುವ ಬಂಡವಾಳದ ಪ್ರಮಾಣ ಮತ್ತು ಅವುಗಳಿಂದ ಬರುವ ಲಾಭ ನಷ್ಟಗಳ ಮಾಹಿತಿಯನ್ನು ಅನುಬಂಧ IXರಲ್ಲಿ ನೀಡಿದೆ. ಈ ಉದ್ಯಮಗಳ ಕಾರ್ಯ ನಿರ್ವಹಣೆಯನ್ನು ಸುಧಾರಿಸುವುದಕ್ಕೆ ನಾವು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಕೊಂಡಿದ್ದೇವೆ. ಅನೇಕ ಉದ್ಯಮಗಳಲ್ಲಿ ನಷ್ಟಕ್ಕೆ ಕಾರಣ ವಿದ್ಯುತ್ ಅಭಾವ, ಕೇಂದ್ರ ಸರ್ಕಾರದ ಪ್ರತಿಕೂಲ ವಾಣಿಜ್ಯ, ತೆರಿಗೆ ಮತ್ತು ಬೆಲೆ ನಿಗದಿಪಡಿಸುವ ನೀತಿ. ಈ ನಷ್ಟವನ್ನು ಶಾಶ್ವತವಾಗಿ ಸಹಿಸಲು ಸರ್ಕಾರಕ್ಕೆ ಸಾಧ್ಯವಿಲ್ಲದಿರುವುದರಿಂದ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸಾರಾಸಾರ ವಿಚಾರ ಮಾಡುತ್ತಿದ್ದೇವೆ.

೪೧. ಮಾನವ ಸಂಪನ್ಮೂಲದಲ್ಲಿ ಹಣ ಹೂಡಿಕೆಯನ್ನು ನಾವು ಸಾಕಷ್ಟು ಹೆಚ್ಚಿಸಿದ್ದೇವೆ. ರಾಜ್ಯದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ತಲಾವಾರು ವೆಚ್ಚವು ೧೯೮೩-೮೪ರಲ್ಲಿ ೬೮ ರೂಪಾಯಿಗಳಿದ್ದು, ಅದು ೧೯೮೬-೮೭ರಲ್ಲಿ ೯೪ ರೂಪಾಯಿಗಳಿಗೆ ಏರಿತು.

೪೨. ನಮ್ಮ ವನ ನಿರ್ಮಾಣ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ, ಈ ಕಾರ್ಯಕ್ರಮವನ್ನು ಉತ್ಸಾಹದಿಂದ ಕೈಗೊಂಡಿರುವುದಕ್ಕಾಗಿ ನಮ್ಮ ಶಾಲಾ ಮಕ್ಕಳನ್ನು ನಾನು ಅಭಿನಂದಿಸುತ್ತೇನೆ. ಈ ಪ್ರಯತ್ನ ವ್ಯಾವಹಾರಿಕವಾಗಿ ಲಾಭದಾಯಕವಾಗುವಂತೆ ಮಾಡುವ ಸಲುವಾಗಿ ವಿವಿಧ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಸರ್ಕಾರದ ಸಿ ಮತ್ತು ಡಿ ದರ್ಜೆಯ ಭೂಮಿಗಳನ್ನು ಗುತ್ತಿಗೆ ನೀಡುವುದಕ್ಕೆ ಸಹ ನಾವು ಆದೇಶಗಳನ್ನು ನೀಡಿದ್ದೇವೆ. ಆದಾಗ್ಯೂ ಈ ಕಾರ್ಯಕ್ರಮದ ಲಾಭ ಪಡೆಯಲು ಸಾಕಷ್ಟು ಜನರು, ಸಂಸ್ಥೆಗಳು ಮುಂದೆ ಬಂದಿಲ್ಲ. ನಮ್ಮ ಯುವಕರು, ಸ್ವಯಂ ಸೇವಕ ಮತ್ತು ದಲಿತ ಸಂಸ್ಥೆಗಳು ಮತ್ತು ಇತರರು ಈ ಹೊಸ ಯೋಜನೆಯ ಪೂರ್ಣ ಪ್ರಯೋಜನ ವನ್ನು ಪಡೆಯಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

೪೩. ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕದ ಕಾರ್ಮಿಕರ ಉತ್ತಮ ನಡತೆಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಕಾರ್ಮಿಕ ಅಶಾಂತತೆಯಿಂದಾಗಿ ಬಿಕ್ಕಟ್ಟು ಉಂಟಾದದ್ದು ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ, ಈ ಔದ್ಯಮಿಕ ಶಾಂತಿಯಿಂದಾಗಿ ಇಂದು ರಾಜ್ಯದಲ್ಲಿ ಮತ್ತಷ್ಟು ಔದ್ಯಮಿಕ ಬಂಡವಾಳ ಹೂಡಿಕೆಗೆ ಅನುಕೂಲ ವಾತಾವರಣ ಉಂಟಾಗಿದೆ.

೪೪. ದೇಶದಲ್ಲಿನ ಇತರ ಯಾವುದೇ ಭಾಗಗಳಿಗಿಂತ ದಕ್ಷಿಣ ಭಾರತ ವಿದೇಶಿ ಪ್ರವಾಸಿಗರಿಗೆ ಹೆಚ್ಚು ಆಕರ್ಷಣೀಯವಾಗಿದೆ. ಆದರೆ ಇದುವರೆಗೂ, ಈ ಬೃಹತ್ ಆಕರ್ಷಣೆ ಲಾಭವನ್ನೂ ಪೂರ್ಣವಾಗಿ ಪಡೆದುಕೊಳ್ಳಲಾಗಿಲ್ಲ. ಕರ್ನಾಟಕದಲ್ಲಿನ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಈಗ ಕೇಂದ್ರ ಪ್ರವಾಸೋದ್ಯಮ ಸಚಿವರು ತೀವ್ರ ಆಸಕ್ತಿಯನ್ನು ತಾಳಿರುವ ಬಗ್ಗೆ ನನಗೆ ಸಂತೋಷವಾಗುತ್ತದೆ. ಯೋಜನಾ ಹಂಚಿಕೆಯಲ್ಲಿ ಪ್ರವಾಸೋದ್ಯಮಕ್ಕೆ ಕನಿಷ್ಟ ಆದ್ಯತೆ ಇರುವುದರಿಂದ ಈ ವಲಯಕ್ಕೆ ಸಂಬಂಧ ಪಟ್ಟಂತೆ ದೊಡ್ಡ ಪ್ರಮಾಣದಲ್ಲಿ ಹಣ ಹೂಡುವಂತೆ ಖಾಸಗಿ ಉದ್ದಿಮೆದಾರರನ್ನು ಪ್ರೋತ್ಸಾಹಿಸಲು ಸರ್ಕಾರವು ಉದ್ದೇಶಿಸಿದೆ. ಸರ್ಕಾರವು ಪ್ರವಾಸೋದ್ಯಮವನ್ನು ಈಗಾಗಲೇ ಒಂದು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಅಗತ್ಯವಾದ ಸೌಲಭ್ಯಗಳನ್ನು ನೀಡಲು ನಿರ್ಧರಿಸಿದೆ,

೪೫ ಬೆಂಗಳೂರಿನ ಸುತ್ತ ಮುತ್ತ ಪ್ರವಾಸಿಗರನ್ನು ಆಕರ್ಷಿಸುವ ಅನೇಕ ಸುಂದರ ಪ್ರವಾಸಿ ತಾಣಗಳಿವೆ. ರಾಜ್ಯ ಸರ್ಕಾರವು ಹೆಸರಘಟ್ಟ, ಬನ್ನೇರಘಟ್ಟ, ಮತ್ತು ಇತರೆ ಇಂಥ ಸ್ಥಳಗಳನ್ನು ಮತ್ತಷ್ಟು ಆಕರ್ಷಕವಾಗುವಂತೆ ಅಭಿವೃದ್ಧಿ ಪಡಿಸುವುದು. ಖಾಸಗಿ ಉದ್ಯಮದ ಮೂಲಕ ಯಲಹಂಕದ ಬಳಿಯಲ್ಲಿ ಡಿಸ್ನಿಲ್ಯಾಂಡ್ ಮಾದರಿಯ ಒಂದು ಮನರಂಜನಾ ಉದ್ಯಾನವನ್ನು ಸ್ಥಾಪಿಸುವ ಪ್ರಸ್ತಾವ ಸರ್ಕಾರದ ಮುಂದಿದೆ. ಅಂಥ ಖಾಸಗಿ ಹಣ ಹೂಡಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ನಾವು ಒದಗಿಸುತ್ತೇವೆ. ಕೇಂದ್ರ ಪ್ರವಾಸೋದ್ಯಮ ರಾಜ್ಯ ಸಚಿವರೊಂದಿಗೆ ನಾನು ಈ ವಿಚಾರವನ್ನು ವಿವರವಾಗಿ ಚರ್ಚಿಸಿದ್ದೇನೆ. ಅವರು ಪಶ್ಚಿಮ ಕರಾವಳಿಯಲ್ಲಿನ ಅತ್ಯಂತ ಆಕರ್ಷಣೀಯ ಪ್ರವಾಸೀ ತಾಣಗಳನ್ನು ಸಂದರ್ಶಿಸಲು ತಮ್ಮ ಇಬ್ಬರು ಹಿರಿಯ ಅಧಿಕಾರಿಗಳನ್ನು ಇತ್ತೀಚೆಗೆ ಕಳುಹಿಸಿಕೊಟ್ಟಿದ್ದಾರೆ ಈ ಸ್ಥಳಗಳಲ್ಲಿ ಕರಾವಳಿ ವಿಶ್ರಾಂತಿ ಧಾಮಗಳ ಮತ್ತು ಪ್ರವಾಸಿ ವಸತಿ ಗೃಹಗಳ ಸರಣಿಯೊಂದನ್ನು ಸರ್ಕಾರವು ಅಭಿವೃದ್ಧಿ ಪಡಿಸುವುದು.

೪೬ ವಿವಿಧ ಇಲಾಖೆಗಳ ವಾರ್ಷಿಕ ವರದಿಗಳನ್ನು ಆಯಾ ಇಲಾಖೆಗಳ ಬೇಡಿಕೆಗಳು ಸದನದಲ್ಲಿ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರುಗಳಿಗೆ ನೀಡಲಾಗುವುದರಿಂದ ಈ ವಿಚಾರವನ್ನು ಕುರಿತು ಇಲ್ಲಿ ಹೇಳಲು ಇಚ್ಛಿಸುವುದಿಲ್ಲ. ಆದರೆ ೧೯೮೭–೮೮ರ ಅವಧಿಯಲ್ಲಿ ಅನುಷ್ಠಾನಕ್ಕೆ ತರುವ ಕೆಲವು ಮುಖ್ಯ ಪ್ರಸ್ತಾವಗಳನ್ನು ಇಲ್ಲಿ ನಮೂದಿಸಲೇಬೇಕು. ಅವು ಈ ಮುಂದಿನಂತಿವೆ.

(I) ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯ ಘಟಕ IIIರ ಕೆಲಸದ ಪ್ರಾರಂಭ ಈ ಉದ್ದೇಶಕ್ಕಾಗಿ ನಾನು ೨೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ,

ii) ಕರ್ನಾಟಕ ವಿದ್ಯುತ್ ನಿಗಮದಿಂದ ಇಂಡಿ, ಜಮಖಂಡಿ, ಕೋಲಾರ ಮತ್ತು ಬೀದರ್‌ನಲ್ಲಿ ಡೀಸಲ್ ಜನರೇಟರುಗಳ ಸ್ಥಾಪನೆಯ ಕಾಮಗಾರಿಯ ಪ್ರಾರಂಭ. ಇತ್ತೀಚೆಗೆ ಭಾರತ ಸರ್ಕಾರದಿಂದ ಈ ಬಗ್ಗೆ ಅನುಮತಿಯನ್ನು ಪಡೆಯಲು ನಮಗೆ ಸಾಧ್ಯವಾಯಿತು.

iii) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಿಂದ ಬೆಂಗಳೂರಿನಲ್ಲಿ ೧೨೦ ಮೆ. ವಾ. ಸಾಮರ್ಥ್ಯದ ಡೀಸಲ್ ಜನರೇಟರಿನ ಸ್ಥಾಪನೆ.

iv) ರಾಜ್ಯ ವಿಶ್ರಾಂತಿ ವೇತನ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ, ಅವರ ಜೀವಿತಾವಧಿಯಲ್ಲಿ ಒಮ್ಮೆ ಎರಡನೇ ದರ್ಜೆ ರೈಲಿನಲ್ಲಿ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡಲು ಸೌಲಭ್ಯ.

v) ಹುಡ್ಕೋ ಸಹಯೋಗದಿಂದ ರಟಕವಿಯ ನೇಕಾರರಿಗಾಗಿ ಗೃಹ ನಿರ್ಮಾಣ ಯೋಜನೆ.

vi) ಈಗಿರುವ ಮಾಸಿಕ ಗೌರವ ಧನಕ್ಕೆ ಬದಲಾಗಿ ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿ ವಿಜೇತ ನಿವೃತ್ತ ಉಪಾಧ್ಯಾಯರಿಗೆ ಅನುಕ್ರಮವಾಗಿ ೨೫,೦೦೦ ರೂಪಾಯಿಗಳ ಮತ್ತು ೧೦,೦೦೦ ರೂಪಾಯಿಗಳ ಇಂಡಿಗಂಟು ಮೊಬಲಗಿನ ಸಂದಾಯ ಯೋಜನೆಯ ವಿಸ್ತರಣೆ.

vii) ಪ್ರತಿಯೊಂದು ಮಂಡಲವು ಗ್ರಂಥಾಲಯವನ್ನು ಹೊಂದುವಂತೆ ಮತ್ತು ಅದು ಮಂಡಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗುವಂತೆ ಮಾಡುವುದಕ್ಕಾಗಿ ಕರ್ನಾಟಕದಲ್ಲಿ ಹೊಸ ‘‘ಗ್ರಂಥಾಲಯ ಚಳುವಳಿ’’ಯ ಪ್ರಾರಂಭ;

viii) ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ–ಹೀಗೆ ಶಿಕ್ಷಣ ಇಲಾಖೆಯನ್ನು ಎರಡು ಇಲಾಖೆಗಳಾಗಿ ವಿಭಜಿಸುವುದು.

ix) ಉರ್ದು ನಿರ್ದೇಶನಾಲಯದ ಸ್ಥಾಪನೆ ;

x) ಬೆಳಗಾಂನಲ್ಲಿ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯದ ಸ್ಥಾಪನೆ ;

xi) ಬೆಂಗಳೂರು ಜಿಲ್ಲೆಯಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯದ ಸ್ಥಾಪನೆ.—ಈ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಬೇಕಾದ ವಿವರಗಳನ್ನು ಸಿದ್ಧಪಡಿಸಲು ಸಮಿತಿಯನ್ನು ನೇಮಕ ಮಾಡಲಾಗುವುದು.

xii) ಮಹಿಳೆಯರಿಗಾಗಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ.

xiii) ಪ್ರವಾಸವನ್ನು ಉದ್ಯಮವೆಂದು ಘೋಷಿಸಿರುವ ಪರಿಣಾಮವಾಗಿ ಪ್ರವಾಸೋದ್ಯಮಕ್ಕೆ ನೆರವು ನೀಡುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಸಂಬಂಧಿಸಿದ ಡೆಪ್ಯುಟಿ ಕಮಿಷನರ್ ಅಧ್ಯಕ್ಷತೆಯಲ್ಲಿ ಎಲ್ಲ ಸೌಲಭ್ಯಗಳೂ ಒಂದೆಡೆ ದೊರೆಯುವಂತೆ (ಸಿಂಗಲ್ ವಿಂಡೊ ಫೆಸಿಲಿಟಿ) ಮಾಡಲಾಗುವುದು;

xiv) ಮುಂಬರುವ ಶೈಕ್ಷಣಿಕ ವರ್ಷದಿಂದ ಹಂಪೆಯಲ್ಲಿ ಮತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿ ಕನ್ನಡದ ಉನ್ನತ ವ್ಯಾಸಂಗ ಕೇಂದ್ರದ ಕಾರ್ಯಾರಂಭ;

xv) ರಾಜ್ಯದಲ್ಲಿನ ಎಲ್ಲ ಅಕೆಡಮಿಗಳಿಗೆ ಹಣಕಾಸಿನ ಏರ್ಪಾಟಿನಲ್ಲಿ ಹೆಚ್ಚಳ, ವೃತ್ತಪತ್ರಿಕಾ ಅಕೆಡಮಿಗಾಗಿ ೫ ಲಕ್ಷ ರೂಪಾಯಿಗಳ ಹೆಚ್ಚಳ;

xvi) ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ;

xvii) ಕ್ರೀಡಾ ಪರಿಷತ್ತಿಗೆ ಅಧಿಕ ಹಣಕಾಸಿನ ಏರ್ಪಾಟು ;

xviii) ರಾಷ್ಟ್ರೀಯ ಕ್ರೀಡಾ ಪಂದ್ಯಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಒಂದು ಪ್ರತ್ಯೇಕ ಯೋಜನೆ.

xix) ರಾಜ್ಯ ಯುವಜನ ಪ್ರಶಸ್ತಿಗಳಿಗೆ ಏರ್ಪಾಟು.

xx) ಬಾಲಭವನಗಳಿಗೆ ಹೆಚ್ಚು ಹಣಕಾಸಿನ ಏರ್ಪಾಟು.

xxi) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕಾಗಿ ಅಧಿಕ ಹಣಕಾಸಿನ ಏರ್ಪಾಟು.

xxii) ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ನಿವೇಶನ ರಹಿತ ವ್ಯಕ್ತಿಗಳಿಗೆ ಮನೆ ನಿವೇಶನಗಳ ಮಂಜೂರಾತಿ.

xxiii) ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳನ್ನು ರಜೆ ಅವಧಿಯಲ್ಲಿ ಅಕ್ಷರ ಸೇನಾ ಕಾರ್ಯಕ್ರಮದಲ್ಲಿ ತೊಡಗಿಸುವುದರ ಮೂಲಕ ಅದರ ವ್ಯಾಪ್ತಿಯನ್ನು ಹೆಚ್ಚಿಸುವುದು.

xxiv) ೧೯೮೭-೮೮ರ ಅವಧಿಯಲ್ಲಿ ಕ್ರಮವಾಗಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಮೇರೆಗೆ ೪೮೩ ಮತ್ತು ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆ ಮೇರೆಗೆ ೩೧೯ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

xxv) ಮೇವು ಅಭಿವೃದ್ಧಿ ನಿಗಮದ ಸ್ಥಾಪನೆ–ಇದು ರಾಷ್ಟ್ರೀಯ ಬಂಜರು ಭೂಮಿ ಅಭಿವೃದ್ಧಿ ಮಂಡಲಿಯ ನೆರವಿನಿಂದ ಮತ್ತು ಸಹಯೋಗದಿಂದ ಮೇವಿನ ಬ್ಯಾಂಕುಗಳನ್ನು ಸಂಘಟಿಸುತ್ತದೆ.

xxvi) ಕನ್ನಡ ಪುಸ್ತಕಗಳನ್ನು ಖರೀದಿಸುವ ಕಾರ್ಯಕ್ರಮಕ್ಕಾಗಿ ಒಟ್ಟು ರೂ. ೫೦ ಲಕ್ಷಗಳ ಏರ್ಪಾಡು

೪೭. ರಾಜ್ಯದ ಮೂರನೇ ವೇತನ ಆಯೋಗವು ಮಾಡಿದ ಶಿಫಾರಸ್ಸುಗಳ ಮೇಲೆ ಸರ್ಕಾರವು ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಂಡಿದೆ.—

i) ಆಯೋಗವು ಶಿಫಾರಸು ಮಾಡಿದ ಪರಿಷ್ಕೃತ ವೇತನ ಶ್ರೇಣಿಗಳನ್ನು ಅಂಗೀಕರಿಸಲಾಗಿದೆ. ಈ ಹೊಸ ವೇತನ ಶ್ರೇಣಿಗಳು ದಿನಾಂಕ ೧-೭-೧೯೮೬ ರಿಂದ ಜಾರಿಗೆ

ಬರುವವು. ಈ ಪರಿಷ್ಕರಣದ ಆರ್ಥಿಕ ಲಾಭವನ್ನು ದಿನಾಂಕ ೧-೧-೧೯೮೭ರಿಂದ ಕೊಡಲಾಗುವುದು.

ii) ಸರ್ಕಾರವು ಮಾಡಲಿರುವ ಪರಿಶೀಲನೆ ಮತ್ತು ಅದನ್ನು ಆಧರಿಸಿ ತೆಗೆದುಕೊಳ್ಳಬಹುದಾದ ನಿರ್ಣಯಗಳಿಗೆ ಒಳಪಟ್ಟು ಎಲ್ಲಾ ಹುದ್ದೆಗಳಿಗೆ ಅವುಗಳ ಈಗಿನ ವೇತನ ಶ್ರೇಣಿಗಳಿಗೆ ಅನುಗುಣವಾದ ಮತ್ತು ತತ್ಸಮವಾದ ಪರಿಷ್ಕೃತ ವೇತನ ಶ್ರೇಣಿಗಳನ್ನು ಮಂಜೂರು ಮಾಡಲಾಗುವುದು. ವೇತನ ಶ್ರೇಣಿಗಳ ಬಗ್ಗೆ ಸರ್ಕಾರಿ ನೌಕರರ ದೂರುಗಳನ್ನು ಪರಿಶೀಲಿಸಲು, ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗುವುದು.

iii) ಈಗಿನ ಮೂಲ ವೇತನಕ್ಕೆ ಈ ಕೆಳಗಿನವುಗಳನ್ನು ಕೂಡಿಸಿ ಬಂದ ಮೊತ್ತಕ್ಕೆ ಅತಿ ನಿಕಟವಾದ ಪರಿಷ್ಕೃತ ವೇತನ ಶ್ರೇಣಿಯ ಮೇಲಿನ ಹಂತದಲ್ಲಿ ವೇತನವನ್ನು ನಿಗದಿ ಮಾಡಲಾಗುವುದು.—

ಎ) ಪ್ರಸ್ತುತ ಮೂಲ ವೇತನದ ಮೇಲೆ ಲಭ್ಯವಿರುವ ಎಲ್ಲಾ ತುಟ್ಟಿಭತ್ಯೆ.

ಬಿ) ಪ್ರಸ್ತುತ ಮೂಲ ವೇತನದ ಮೇಲೆ ಲಭ್ಯವಿರುವ ಎರಡು ಕಂತುಗಳ ತಾತ್ಕಾಲಿಕ ಪರಿಹಾರ.

ಸಿ) ಸರ್ವಿಸ್ ವೈಟೇಜ್ ಎಂದು ಪ್ರಸ್ತುತ ಮೂಲ ವೇತನದ ಶೇಕಡ ೧೫ರಷ್ಟು ಕನಿಷ್ಟ ಮಿತಿ ರೂ. ೭೫.೦೦ ಮತ್ತು ಗರಿಷ್ಟ ಮಿತಿ ರೂ. ೩೫೦.೦೦.

ವೇತನ ಪರಿಷ್ಕರಣದ ಆರ್ಥಿಕ ಲಾಭವನ್ನು ದಿನಾಂಕ ೧-೧-೧೯೮೭ ರಿಂದ ಕೊಟ್ಟರೂ. ೧೯೮೭ರ ಜನವರಿ ಮತ್ತು ಫೆಬ್ರವರಿ ತಿಂಗಳುಗಳಿಗೆ ಸಂಬಂಧಿಸಿದಂತೆ ಕೊಡಬೇಕಾದ ಬಾಕಿ ಹಣವನ್ನು ಸಣ್ಣ ಉಳಿತಾಯ ಸರ್ಟಿಫಿಕೇಟುಗಳಲ್ಲಿ ತೊಡಗಿಸಲಾಗುವುದು.

iv) ಕೇಂದ್ರ ಸರ್ಕಾರವು ತನ್ನ ನೌಕರರಿಗಾಗಿ ಅಂಗೀಕರಿಸಿದ ತುಟ್ಟಿಭತ್ಯೆಯ ಸೂತ್ರವನ್ನೇ ರಾಜ್ಯ ಸರ್ಕಾರವೂ ಅಳವಡಿಸಿಕೊಂಡಿದೆ. ಸರ್ಕಾರಿ ನೌಕರರಿಗೆ ಅನ್ವಯಿಸುವ ದರದ ಪ್ರಕಾರ, ಪೆನ್‌ಷನ್‌ದಾರರಿಗೂ ತುಟ್ಟಿಭತ್ಯೆಯನ್ನು ಕೊಡಲಾಗುವುದು.

v) ವೇತನ ಆಯೋಗವು ಶಿಫಾರಸು ಮಾಡಿದಂತೆ, ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗಳ ವಿನಿಮಯಕ್ಕಾಗಿ ವಿವಿಧ ಸ್ಥಳಗಳ ವರ್ಗೀಕರಣ ಮತ್ತು ಈ ಭತ್ಯೆಗಳ ಹೆಚ್ಚಳವನ್ನು ಮಂಜೂರು ಮಾಡಲಾಗಿದೆ. ಇವು ದಿನಾಂಕ ೧-೧-೧೯೮೭ ರಿಂದ ಜಾರಿಗೆ ಬರುವುವು. ೧೯೮೭ರ ಜನವರಿ ಮತ್ತು ಫೆಬ್ರವರಿ ತಿಂಗಳುಗಳಿಗೆ ಸಂಬಂಧಿಸಿದಂತೆ, ಕೊಡಬೇಕಾದ ಬಾಕಿ ಹಣವನ್ನು ಸಣ್ಣ ಉಳಿತಾಯ ಸರ್ಟಿಫಿಕೇಟುಗಳಲ್ಲಿ ತೊಡಗಿಸಲಾಗುವುದು.

vi) ಪ್ರಯಾಣ ಭತ್ಯೆ, ದೈನಿಕ ಭತ್ಯೆ, ರಜೆ ಮತ್ತು ಸಾಲಗಳಿಗೆ ಸಂಬಂಧಿಸಿದಂತೆ, ಆಯೋಗವು ಮಾಡಿದ ಶಿಫಾರಸುಗಳನ್ನು, ಕೆಲವೊಂದು ಬದಲಾವಣೆಗಳೊಂದಿಗೆ, ಅಂಗೀಕರಿಸಲಾಗಿದೆ.

vii) ಪರಿಷ್ಕೃತ ವೇತನ ಶ್ರೇಣಿಗಳು, ತುಟ್ಟಿಭತ್ಯೆ ಮನೆಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗಳ ಲಾಭವನ್ನು, ಸರ್ಕಾರಿ ನೌಕರರಲ್ಲದೆ, ಈ ಕೆಳಗಿನ ನೌಕರರಿಗೂ ಅನ್ವಯಿಸಲು ಉದ್ದೇಶಿಸಲಾಗಿದೆ.

ಎ) ರಾಜ್ಯದ ಸಹಾಯಾನುದಾನ ಪಡೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳ ನೌಕರರು.

ಬಿ) ರಾಜ್ಯದ ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿ ವರ್ಗಕ್ಕೆ ಸೇರಿದ ನೌಕರರು, ಮತ್ತು

ಸಿ) ರಾಜ್ಯದ ಸ್ಥಾನಿಕ ಸಂಸ್ಥೆಗಳ ನೌಕರರು;

೪೮. ವೇತನ ಶ್ರೇಣಿಗಳ ಪರಿಷ್ಕರಣ ಮತ್ತು ಭತ್ಯಗಳ ಪರಿಷ್ಕರಣದಿಂದಾಗಿ ಒಂದು ಪೂರ್ಣ ವರ್ಷದಲ್ಲಿ ೧೦೦ ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚ ಆಗಬಹುದೆಂದು ಅಂದಾಜು ಮಾಡಲಾಗಿದೆ. ಇದೊಂದು ದೊಡ್ಡ ಆರ್ಥಿಕ ಭಾರ. ಈ ಭಾರ ಜನತೆಯ ಮೇಲೆ ಬೀಳುತ್ತದೆ ಎಂಬುದನ್ನೂ ಮತ್ತು ಸಂಬಳ ಸಾರಿಗೆಯ ಮೇಲೆ ಇಷ್ಟು ಹೆಚ್ಚುವರಿ ಖರ್ಚು ಮಾಡಬೇಕಾಗಿದ್ದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುವುವು ಎಂಬುದನ್ನೂ ಪ್ರತಿಯೊಬ್ಬ ಸರ್ಕಾರಿ ನೌಕರನೂ ಗಮನಿಸಬೇಕು. ಸರ್ಕಾರಿ ನೌಕರರು ದಕ್ಷತೆಯಿಂದ ಪ್ರಜ್ಞಾಪೂರ್ವಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಜನತೆಯ ಸೇವೆಯನ್ನು ಮಾಡುವರೆಂದು ನಾನು ಹಾರೈಸುತ್ತೇನೆ.

ತೆರಿಗೆ ನಿರ್ಧರಣೆ

೪೯. ಈಗ ತೆರಿಗೆಯ ವಿಚಾರ. ನನ್ನ ತೆರಿಗೆ ನೀತಿಯ ಉದ್ದೇಶಗಳು ಈ ಕೆಳಕಂಡಂತಿವೆ.—

i) ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಕೈಗೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಗಣನೀಯ ಪ್ರಮಾಣದಲ್ಲಿ ಸಾಧಿಸುವುದು ;

ii) ಸಾಮಾಜಿಕ ನ್ಯಾಯವನ್ನು ಸಾಧಿಸಲು, ಸಮರ್ಥರಿದ್ದವರಿಂದ ಹೆಚ್ಚು ಹೆಚ್ಚಾಗಿ ತೆರಿಗೆ ವಸೂಲು ಮಾಡುವುದು ;

iii) ವ್ಯಾಪಾರ ಮತ್ತು ಸಂಪನ್ಮೂಲಗಳು ಬೇರೆ ಕಡೆಗೆ ಹೋಗುವುದನ್ನು ಹಾಗೂ ತೆರಿಗೆ ಗಳ್ಳತನವನ್ನು ತಡೆಗಟ್ಟಲು ತೆರಿಗೆಯ ರಚನೆ ಮತ್ತು ರೂಪರೇಖೆಗಳನ್ನು ಸುವ್ಯವಸ್ಥಿತಗೊಳಿಸಿ ಸರಳೀಕರಿಸುವುದು ;

iv) ಅಧಿಕ ಸಂಪನ್ಮೂಲಗಳ ಶೇಖರಣೆ.

೫೦. ಮಾರಾಟ ತೆರಿಗೆ ;

i) ಅನುಬಂಧ X ರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ಮಾರಾಟ ತೆರಿಗೆಯ ದರಗಳನ್ನು ಹೆಚ್ಚಿಸಲು ನಾನು ಪ್ರಸ್ತಾವಿಸುತ್ತೇನೆ :

ii) ಅನುಬಂಧ XI ರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲಿನ ಮಾರಾಟ ತೆರಿಗೆಯ ದರಗಳನ್ನು ಇಳಿಸಲು ಉದ್ದೇಶಿಸಿದ್ದೇನೆ :

iii) ಅನುಬಂಧ XII ರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲಿನ ಮಾರಾಟ ತೆರಿಗೆಗೆ ವಿನಾಯಿತಿ ನೀಡಲು ಪ್ರಸ್ತಾವಿಸುತ್ತೇನೆ :

iv) ಅನುಬಂಧ XIII ರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ಮೊದಲ ಹಂತದ ತೆರಿಗೆಯ ಜೊತೆಗೆ ಕೊನೆಯ ಹಂತದಲ್ಲಿ ಅವುಗಳ ಮುಂದೆ ಸೂಚಿಸಿರುವ ದರಗಳ ಪ್ರಕಾರ ಮಾರಾಟ ತೆರಿಗೆಯನ್ನು ವಿಧಿಸಲಾಗುವುದು :

v) ಪ್ರಸ್ತುತ ಮಾರಾಟ ತೆರಿಗೆಯಿಂದ ವಿನಾಯಿತಿ ಪಡೆದಿರುವ ಮತ್ತು ಸೂಚಿಸಿದ ದರಗಳಲ್ಲಿ ಹೊಸದಾಗಿ ಮಾರಾಟ ತೆರಿಗೆಯನ್ನು ವಿಧಿಸಲಾಗುವ ಸರಕುಗಳ ಪಟ್ಟಿಯನ್ನು ಅನುಬಂಧ XIV ರಲ್ಲಿ ಕೊಡಲಾಗಿದೆ.

vi) ಪ್ರಸ್ತುತ ಬಹು ಹಂತ ತೆರಿಗೆಗೆ ಒಳಪಟ್ಟಿರುವ ಈಗ ಏಕ ಹಂತ ತೆರಿಗೆಯನ್ನು ವಿಧಿಸಲಾಗುವ ಸರಕುಗಳ ಪಟ್ಟಿಯನ್ನು ಅನುಬಂಧ XV ರಲ್ಲಿ ಕೊಡಲಾಗಿದೆ :

vii) ಅನುಬಂಧ XVI ರಲ್ಲಿ ಪಟ್ಟಿಮಾಡಿದ ಸರಕುಗಳ ಮೇಲೆ ತೆರಿಗೆಯ ಹಂತವನ್ನು ಬದಲಾಯಿಸಲಾಗುವುದು :

viii) ಮಾರಾಟ ತೆರಿಗೆಗೆ ಸಂಬಂಧಿಸಿದ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಮತ್ತು ಬಲಪಡಿಸಲು ಈ ಕೆಳಕಂಡ ಕೆಲವು ಇತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.—

ಎ) ಬಿಡಿ ಭಾಗಗಳು, ಕಚ್ಚಾ ಸಾಮಗ್ರಿಗಳು ಮತ್ತು ಪ್ಯಾಕೇಜ್ ಸಾಮಾನುಗಳನ್ನು ಹೊರತುಪಡಿಸಿ, ವ್ಯಾಪಾರಸ್ಥರು ಬೇರೆ ವ್ಯಾಪಾರಸ್ಥರ ಬ್ರ್ಯಾಂಡ್ ಹೆಸರುಗಳಲ್ಲಿ ತಯಾರಿಸಿ ಸರಬರಾಜು ಮಾಡುವ ಸರಕುಗಳ ಬೆಲೆಯಲ್ಲಿ ಹಾಗೂ ಅವುಗಳನ್ನು ಆ ಬಳಿಕ ಮಾರಾಟ ಮಾಡುವ ಬೆಲೆಯಲ್ಲಿ ಗಣನೀಯವಾದ ಅಂತರವಿರುವುದರಿಂದ ತರುವಾಯದ ಮಾರಾಟಗಾರನ ಮಾರಾಟದ ಮೇಲೆ ಇಂತಹ ಮಾರಾಟದ ಮೇಲೆ ಮೊದಲ ಹಂತದ ಮಾರಾಟವೆಂಬಂತೆ ತೆರಿಗೆಯನ್ನು ವಿಧಿಸಲಾಗುವುದು.

ಬಿ) ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಕರ್ನಾಟಕದ ಮೂಲಕ ಸರಕುಗಳನ್ನು ಸಾಗಿಸುವ ವಾಹನಗಳ ಚಲನೆಯನ್ನು ನಿಯಂತ್ರಿಸಲು ''ಟ್ರಾನ್ಸಿಟ್ ಪಾಸ್'' ಪದ್ಧತಿಯನ್ನು ಪ್ರಾರಂಭಿಸಲಾಗುವುದು.

ಸಿ) ಲೆಕ್ಕದ ಪುಸ್ತಕಗಳು ಮತ್ತು/ಅಥವಾ ತೆರಿಗೆ ವಿಧಿಸಬಹುದಾದ ಸರಕುಗಳನ್ನು ಇಟ್ಟಿರಬಹುದೆಂದು ಊಹಿಸಲಾದ ಪೆಟ್ಟಿಗೆಗಳು, ಧಾರಕಗಳು (ರಿಸೆಪ್ಟಕಲ್ಸ್) ಅಥವಾ ಕಟ್ಟಡಗಳು ಅಥವಾ ಅದರ ಯಾವುದೇ ಭಾಗವನ್ನು ಮೊಹರು ಮಾಡಲು ಮತ್ತು ವ್ಯಾಪಾರಿಗಳ ವ್ಯಾಪಾರದ ಸ್ಥಳಗಳನ್ನು, ಗೋಡೌನುಗಳನ್ನು ಅಥವಾ ಧಾರಕಗಳನ್ನು ಪರಿಶೀಲನೆಗೆ ಶೋಧನೆ ಸಲುವಾಗಿ ತೆಗೆಯಲು ಅವರು ನಿರಾಕರಿಸಿದಲ್ಲಿ ಅವುಗಳನ್ನು ಒಡೆದು ತೆಗೆಯಲು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಅಗತ್ಯ ಅಧಿಕಾರವನ್ನು ಕೊಡಲಾಗುವುದು. ಈ ಅಧಿಕಾರಗಳನ್ನು ಅಧಿಕಾರಿಗಳು ದುರುಪಯೋಗ ಪಡಿಸದಂತೆ ನೋಡಿಕೊಳ್ಳಲು ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗುವುದು.

ಡಿ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ತೆರಿಗೆ ತಪ್ಪಿಸಿಕೊಳ್ಳುವುದನ್ನು ನಿವಾರಿಸಲು ಅಥವಾ ತಡೆಯಲು ರಾಜ್ಯದಲ್ಲಿ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ ಚೆಕ್ ಪೋಸ್ಟ್‌ಗಳ ಸ್ಥಾಪನೆಗಳನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಕಮಿಷನರಿಗೆ ಅಧಿಕಾರ ನೀಡಲಾಗುವುದು.

ಇ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ''ವರ್ಷ'' ಎಂದರೆ ಆರ್ಥಿಕ ವರ್ಷ, ಎಂದರೆ ತೆರಿಗೆ ನಿರ್ಧರಣೆ ಮತ್ತು ತೆರಿಗೆಗಳ ವಸೂಲಿ ವಿಷಯದಲ್ಲಿ ಏಕರೂಪತೆಯನ್ನು ತರುವುದಕ್ಕಾಗಿ ಏಪ್ರಿಲ್‌ನಿಂದ ಮಾರ್ಚ್‌ವರೆಗಿನ ವರ್ಷವೆಂದು ಪರಿಗಣಿಸಲಾಗುವುದು.

ಎಫ್) ತೆರಿಗೆ ವಸೂಲಿ ಅಧಿಕಾರಿಗಳಿಗೆ ವ್ಯಾಪಾರಿಗಳನ್ನು ಗುರಿತಿಸುವುದು ಸಾಧ್ಯವಾಗುವಂತೆ ೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೀಡಲಾದ ನೋಂದಣಿ ಪ್ರಮಾಣ ಪತ್ರಗಳ ಮೇಲೆ ಅವರ ಭಾವಚಿತ್ರಗಳನ್ನು ಕಡ್ಡಾಯವಾಗಿ ಅಂಟಿಸುವುದು.

ಜಿ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ಮತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮಗಳ ಮೇರೆಗೆ ಈಗಾಗಲೇ ನಿರ್ಧರಣೆ ಮುಗಿದಿರುವುದನು ಪುನಃ ನಿರ್ಧರಿಸುವ ಸಲುವಾಗಿ ಪ್ರಸ್ತುತ ಇರುವ ಹತ್ತು ವರ್ಷಗಳ ಕಾಲ ಪರಿಮಿತ ಅವಧಿಯನ್ನು ದಿನಾಂಕ ೧-೪-೧೯೮೮ ರಿಂದ, ಎಂಟು ವರ್ಷಗಳಿಗೆ ಇಳಿಸುವುದು.

ix) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ೬ನೇ ಅನುಸೂಚಿಯಲ್ಲಿ ಸೇರಿಸಲಾಗುವ ಮತ್ತು ಸೂಚಿತ ದರಗಳ ಪ್ರಕಾರ ತೆರಿಗೆಗೆ ಒಳಪಡುವ ಕೆಲವು ರೀತಿಯ ಕಾಮಗಾರಿಗಳ ಕರಾರುಗಳನ್ನು ಅನುಬಂಧ XVII ರಲ್ಲಿ ಪಟ್ಟಿ ಮಾಡಲಾಗಿದೆ.

೫೧. ವಹಿವಾಟು ತೆರಿಗೆ :

i) ಕಳೆದ ವರ್ಷದ ಬಜೆಟ್‌ನಲ್ಲಿ ಎಲ್.ಪಿ.ಜಿ.ಯು (ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್) ಮಾರಾಟದ ವಹಿವಾಟಿನ ಮೇಲೆ ವಹಿವಾಟು ತೆರಿಗೆಯನ್ನು ವಿನಾಯಿತಿಗೊಳಿಸಲಾಗಿತ್ತು. ಇದನ್ನು ದಿನಾಂಕ ೧-೪-೧೯೮೭ ರಿಂದ ಜಾರಿಗೆ ಬರುವಂತೆ ಪುನಃ ವಿಧಿಸುತ್ತಿದ್ದೇವೆ.

ii) ಕಳೆದ ವರ್ಷ ವಹಿವಾಟು ತೆರಿಗೆಯಿಂದ ವಿನಾಯಿತಿ ಪಡೆಯಲು ವಾರ್ಷಿಕ ವಹಿವಾಟಿನ ಮಿತಿಯನ್ನು ೫ ಲಕ್ಷ ರೂಪಾಯಿಗಳಿಂದ ೧೫ ಲಕ್ಷ ರೂಪಾಯಿಗಳಿಗೆ ನಾವು ಏರಿಸಿದ್ದೆವು. ಆದರೆ ಈ ರಿಯಾಯಿತಿಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ಕಂಡು ಬಂದಿದೆ. ವಹಿವಾಟು ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮಾರಾಟಗಾರರು ತಮ್ಮ ಅಂಗಡಿಗಳನ್ನು ವಿಭಜಿಸುತ್ತಿದ್ದಾರೆ. ಆದುದರಿಂದ, ವಹಿವಾಟು ತೆರಿಗೆಯಿಂದ ವಿನಾಯಿತಿ ಪಡೆಯಲು ಈಗಿರುವ ವಾರ್ಷಿಕ ವಹಿವಾಟಿನ ಮಿತಿಯನ್ನು ೧೫ ಲಕ್ಷ ರೂಪಾಯಿಗಳಿಂದ ೫ ಲಕ್ಷ ರೂಪಾಯಿಗಳಿಗೆ ಇಳಿಸಲು ನಾನು ಉದ್ದೇಶಿಸಿದ್ದೇನೆ.

iii) ಕಾರ್ಪೋರೇಟ್ ವಲಯಕ್ಕೆ ಸೇರಿದ ವ್ಯಾಪಾರಿಗಳಿಗೆ ಮತ್ತು ಕಾರ್ಪೋರೇಟ್ ವಲಯಕ್ಕೆ ಸೇರದ ವ್ಯಾಪಾರಿಗಳಿಗೆ ಭಿನ್ನವಾದ ದರಗಳಲ್ಲಿ ವಹಿವಾಟು ತೆರಿಗೆಯನ್ನು ವಿಧಿಸಲು ನಾನು ಉದ್ದೇಶಿಸಿದ್ದೇನೆ. ವಹಿವಾಟು ತೆರಿಗೆಯ ಹೊಸ ದರಗಳು ಈ ಮುಂದಿನಂತಿದೆ.—

ಕಾರ್ಪೋರೇಟ್ ವಲಯಕ್ಕೆ ಸೇರದ ವ್ಯಾಪಾರಿಗಳಿಗೆ ;

ಎ) ರೂ. ೫ ಲಕ್ಷಕ್ಕಿಂತಲೂ ಕಡಿಮೆ ವಾರ್ಷಿಕ ವಹಿವಾಟು ಇರುವಂತಹ ವ್ಯಾಪಾರಿಗಳಿಗೆ ವಿನಾಯಿತಿ

ಬಿ) ರೂ. ೫ ಲಕ್ಷ ಅಥವಾ ಅದಕ್ಕೂ ಹೆಚ್ಚು ವಾರ್ಷಿಕ ವಹಿವಾಟನ್ನು ಹೊಂದಿರುವಂತಹ ವ್ಯಾಪಾರಿಗಳಿಗೆ ಶೇಕಡಾ ೧.೨೫

ಕಾರ್ಪೋರೇಟ್ ವಲಯದ ವ್ಯಾಪಾರಿಗಳಿಗೆ :

ಎ)	೫ ಲಕ್ಷ ರೂಪಾಯಿಗಳಿಗಿಂತಲೂ ಕಡಿಮೆ ವಾರ್ಷಿಕ ವಹಿವಾಟು ಇರುವಂತಹ ವ್ಯಾಪಾರಿಗಳಿಗೆ	ವಿನಾಯಿತಿ
ಬಿ)	೫ ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚು ವಾರ್ಷಿಕ ವಹಿವಾಟನ್ನು ಹೊಂದಿರುವಂತಹ ಆದರೆ ೨೫೦ ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟು ಇರುವಂತಹ ವ್ಯಾಪಾರಿಗಳಿಗೆ	ಶೇಕಡ ೧.೨೫
ಸಿ)	೨೫೦ ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚು ವಾರ್ಷಿಕ ವಹಿವಾಟು ಇರುವಂತಹ ವ್ಯಾಪಾರಿಗಳಿಗೆ	ಶೇಕಡ ೧.೫

೫೨. ಈ ಮುಂದಿನ ಹೆಚ್ಚಿನ ಪರಿಹಾರಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ.—

೧) ಸಿವಿಲ್ ಕಾಮಗಾರಿಗಳ ನಿರ್ಮಾಣದಲ್ಲಿ ಬಳಸಲಾಗುವ ಸರಕುಗಳ ಮಾರಾಟದ ಮೇಲೆ ತೆರಿಗೆ ಸಂದಾಯ ಮಾಡಬೇಕಾದಂತಹ ವ್ಯಾಪಾರಿಗಳಿಗೆ ಕರ್ನಾಟಕ ಮಾರಾಟ ತೆರಿಗೆಯ ಅಧಿನಿಯಮದ ಮೇರೆಗೆ ರಾಜಿ-ತೆರಿಗೆ ಸಂದಾಯ ಮಾಡುವ ಸೌಲಭ್ಯವನ್ನು ನೀಡ ಬಯಸುತ್ತೇನೆ. ಕರ್ನಾಟಕ ಮಾರಾಟ ತೆರಿಗೆಯ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ವಹಿವಾಟು ತೆರಿಗೆಯೂ ಸೇರಿದಂತೆ ಎಲ್ಲಾ ತೆರಿಗೆಗಳ ಬದಲಾಗಿ ಅಂತಹ ಸಂದರ್ಭಗಳಲ್ಲಿ ಒಟ್ಟು ವಹಿವಾಟಿನ ಮೇಲೆ ಸರಾಸರಿ ದರವಾಗಿ ಶೇಕಡಾ ೨ರಷ್ಟು ತೆರಿಗೆಯನ್ನು ವಿಧಿಸಲಾಗುವುದು.—

೨) ಚಲನಚಿತ್ರದ ಬಳಕೆಯ ಹಕ್ಕಿನ ವರ್ಗಾವಣೆ ಮೇಲೆ (ಗುತ್ತಿಗೆಯ ಮೇಲೆ) ಈಗ ನಿರ್ಮಾಪಕರಿಂದ ಹಿಡಿದು ಪ್ರದರ್ಶಕನ ವರೆಗೆ ಪ್ರತಿಯೊಂದು ಗುತ್ತಿಗೆಯ ಮೇಲೂ ಬಹು ಹಂತದಲ್ಲಿ ತೆರಿಗೆಯನ್ನು ವಿಧಿಸಲಾಗುತ್ತಿದೆ. ಇದನ್ನು ಈಗ ಒಂದೇ ಹಂತದ ತೆರಿಗೆಯಾಗಿ ಪ್ರದರ್ಶಕನಿಗೆ ಗುತ್ತಿಗೆಗೆ ಕೊಡುವ ಹಂತದಲ್ಲಿ ಮಾತ್ರ ವಿಧಿಸಲಾಗುವುದು. ಚಲನಚಿತ್ರ ಗುತ್ತಿಗೆ ನೀಡುವುದರ ಮೇಲೆ ವಿಧಿಸುವ ತೆರಿಗೆಯ ದರವನ್ನು ಈಗಿರುವ ಶೇಕಡ ೫ರ ಮಟ್ಟದಿಂದ ಶೇಕಡ ೪ರ ಮಟ್ಟಕ್ಕೆ ಇಳಿಸಲಾಗಿದೆ.

೩) ಕರ್ನಾಟಕ ಮಾರಾಟ ತೆರಿಗೆಯ ಅಧಿನಿಯಮದ ಮೇರೆಗೆ ಹೋಟೆಲು ಮತ್ತು ರೆಸ್ಟೋರೆಂಟ್‌ಗಳ ಮಾಲೀಕರು ಸಂದಾಯ ಮಾಡಬೇಕಾದ ತೆರಿಗೆಯ ಬದಲಾಗಿ, ರಾಜಿ–ತೆರಿಗೆಯ ಅನುಕೂಲವನ್ನು ಪಡೆದುಕೊಳ್ಳಲು ಈಗಿರುವ ವಾರ್ಷಿಕ ವಹಿವಾಟು ಮಿತಿ ೭.೫ ಲಕ್ಷ ರೂಪಾಯಿ, ಬಹಳಷ್ಟು ಹೋಟೆಲು ಮತ್ತು ರೆಸ್ಟೋರೆಂಟ್‌ಗಳ ಮಾಲೀಕರಿಗೆ ಈ ಅವಕಾಶ ದೊರೆಯುವಂತೆ ಮಾಡಲು ವಾರ್ಷಿಕ ವಹಿವಾಟು ಮಿತಿಯನ್ನು ೧೫ ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ.

ಈ ರಾಜಿ–ವ್ಯವಸ್ಥೆಯ ವಿವರಗಳನ್ನು ಅನುಬಂಧ XVIIIರಲ್ಲಿ ನೀಡಲಾಗಿದೆ.—

೪) ಕಡಲೆಕಾಯಿ ಎಣ್ಣೆಯ ತಯಾರಿಕೆಗಾಗಿ ಬಳಸಿಕೊಳ್ಳುವ ಕಡಲೆಕಾಯಿ ಹಾಗೂ ಬೀಜಗಳ ಖರೀದಿಯ ಮೇಲೆ ಎಣ್ಣೆ ಗಿರಣಿಯವರು ಕರ್ನಾಟಕ ಮಾರಾಟ ತೆರಿಗೆಯ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಸಂಬಂಧದಲ್ಲಿ ಅವರು ತಯಾರಿಸಿದ ಎಣ್ಣೆಯನ್ನು ಕರ್ನಾಟಕ ರಾಜ್ಯದೊಳಗೆ ಅಥವಾ ಅಂತರರಾಜ್ಯ ಮಾರಾಟದ ಸಂದರ್ಭದಲ್ಲಿ ಮಾರಾಟ ಮಾಡಿದರೆ, ಅದಕ್ಕೆ ವಿನಾಯಿತಿ ನೀಡಲಾಗುವುದು.—

೫) ಖಾದಿ ಮತ್ತು ಗ್ರಾಮೋದ್ಯಮ ಅಧಿನಿಯಮ, ೧೯೫೬ರ ಮೇರೆಗೆ ರಚಿತವಾದ ಖಾದಿ ಮತ್ತು ಗ್ರಾಮೋದ್ಯಮ ನಿಗಮವು "ಗ್ರಾಮೋದ್ಯಮ" ಎಂದು ಮಾನ್ಯತೆ ನೀಡಿರುವ ಇಟ್ಟಿಗೆ ಮತ್ತು ಹೆಂಚಿನ ಉದ್ಯಮಗಳು, ಆ ಘಟಕಗಳಲ್ಲಿ ತಯಾರಿಸಲಾದ ಇಟ್ಟಿಗೆ ಮತ್ತು ಹೆಂಚುಗಳ ಮಾರಾಟದ ಮೇಲಿನ ತೆರಿಗೆಯನ್ನು ಕರ್ನಾಟಕ ಮಾರಾಟ ತೆರಿಗೆ ನಿಯಮಾವಳಿ ೧೯೫೭ರ ೨೫(ಎ) ನಿಯಮದಲ್ಲಿ ನಿಯಮಿಸಲಾದ ಷರತ್ತುಗಳಿಗೊಳಪಟ್ಟು ವಿನಾಯಿತಿ ಪಡೆಯುತ್ತವೆ.—

೬) ಬೆಣ್ಣೆ ಮತ್ತು ತುಪ್ಪದ ಮೇಲೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ೬ನೇ ಪ್ರಕರಣದ ಮೇರೆಗೆ ವ್ಯಾಪಾರಿಗಳು ಸಂದಾಯ ಮಾಡಬೇಕಾದ ಖರೀದಿ ತೆರಿಗೆಯನ್ನು ಆ ಸರಕುಗಳ ವ್ಯಾಪಾರಿಗಳಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ದಿನಾಂಕ ೧–೪–೧೯೮೪ ರಿಂದ ಜಾರಿಗೆ ಬರುವಂತೆ ಶೇಕಡ ೨ ರಷ್ಟಕ್ಕೆ ಇಳಿಸಲಾಗಿದೆ.

೫೩. ಪ್ರವೇಶ ತೆರಿಗೆ

೧) ಪೆಟ್ರೋಲಿಯಂ ಉತ್ಪನ್ನಗಳು, ಕಚ್ಚಾ ವಸ್ತುಗಳು ಮತ್ತು ಪ್ಯಾಕಿಂಗ್ ಸಾಮಗ್ರಿಗಳ ಮೇಲೆ ಪ್ರವೇಶದರ ತೆರಿಗೆಯನ್ನು ಶೇಕಡ ೧ರಿಂದ ಶೇಕಡ ೨ಕ್ಕೆ ಏರಿಸಲು ನಾನು ಉದ್ದೇಶಿಸಿದ್ದೇನೆ.—

೨) ೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ವರ್ಷಕ್ಕೆ ೭೫,೦೦೦ ರೂಪಾಯಿಗಳ ಒಟ್ಟು ವಹಿವಾಟು ಇರುವ ಪ್ರತಿಯೊಬ್ಬ ವ್ಯಾಪಾರಿ ಮತ್ತು ವರ್ಷದಲ್ಲಿ ಅಥವಾ ಅದರ ಭಾಗದಲ್ಲಿ ಸರಾಸರಿ ಮೌಲ್ಯ ೭೫,೦೦೦ ರೂಪಾಯಿಗಳು ಮತ್ತು ಅದಕ್ಕಿಂತ ಹೆಚ್ಚಾಗಿರುವಂಥ ಅನುಸೂಚಿತ ಸರಕುಗಳನ್ನು ಒಂದು ಸ್ಥಳೀಯ ಪ್ರದೇಶದೊಳಗೆ ತರುವ ಪ್ರತಿಯೊಬ್ಬ ವ್ಯಾಪಾರಿಯನ್ನು ನೋಂದಣಿ ಮತ್ತು ಪ್ರವೇಶ ತೆರಿಗೆ ಸಂದಾಯಕ್ಕೆ ಒಳಪಡಿಸಬೇಕು.—

೩) ಬಹುಹಂತ ಸ್ವರೂಪದ ಪ್ರವೇಶ ತೆರಿಗೆಯನ್ನು ಈಗ ಏಕಹಂತದ ಪ್ರವೇಶ ತೆರಿಗೆಯನ್ನಾಗಿ ಬದಲಾಯಿಸಲು ನಾನು ಉದ್ದೇಶಿಸಿದ್ದೇನೆ, ಎಂದರೆ ಅನುಸೂಚಿತ ಸರಕುಗಳು ಈಗಾಗಲೇ

ರಾಜ್ಯದ ಇತರ ಯಾವುದೇ ಸ್ಥಳೀಯ ಪ್ರದೇಶದಲ್ಲಿ ಪ್ರವೇಶ ತೆರಿಗೆಗೆ ಒಳಗಾಗಿದ್ದರೆ ಅಂಥ ಸರಕುಗಳಿಗೆ ಯಾವುದೇ ಸ್ಥಳೀಯ ಪ್ರದೇಶದಲ್ಲಿ ಪ್ರವೇಶ ತೆರಿಗೆ ವಿಧಿಸುವುದರಿಂದ ವಿನಾಯಿತಿ ನೀಡಲಾಗುವುದು.—

೪) ಯಾವುದೇ ಅಥವಾ ಎಲ್ಲ ವಸ್ತುಗಳನ್ನು ತೆರಿಗೆಗೆ ಒಳಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಲು ಮತ್ತು ಅದನ್ನು ಶಕ್ತಗೊಳಿಸಲು ಸಾಧ್ಯವಾಗುವಂತೆ ಪ್ರವೇಶ ತೆರಿಗೆ ಅಧಿನಿಯಮವನ್ನು ತಿದ್ದುಪಡಿ ಮಾಡಲು ನಾನು ಪ್ರಸ್ತಾವಿಸಿದ್ದೇನೆ. ಈಗಿರುವ ಶೇಕಡ ೨ರಷ್ಟು ಪ್ರವೇಶ ತೆರಿಗೆಯ ಬದಲು ಶೇಕಡ ೫ರಷ್ಟು ಗರಿಷ್ಠ ಪ್ರವೇಶ ತೆರಿಗೆ ದರವನ್ನು ಕಲ್ಪಿಸುವ ಸಲುವಾಗಿ ಈ ಅಧಿನಿಯಮವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.—

೫) ಪ್ರವೇಶ ತೆರಿಗೆಯ ಸಂಬಂಧದಲ್ಲಿ ಮುಂದೆ ಕೊಟ್ಟಿರುವ ಪರಿಹಾರಗಳನ್ನು ಮಂಜೂರು ಮಾಡಲು ನಾನು ಉದ್ದೇಶಿಸಿದ್ದೇನೆ.—

ಎ) ಗೋಣಿ ಚೀಲಗಳ ಮೇಲಣ ಪ್ರವೇಶ ತೆರಿಗೆ ೧-೪-೧೯೮೫ರಿಂದ ೨೮-೧೦-೧೯೮೬ರ ವರೆಗೆ ವಿನಾಯಿತಿ ನೀಡಲಾಗುವುದು. ವ್ಯಾಪಾರಿಗಳಿಗೆ ಉಂಟಾಗುವ ಕೆಲವು ತೊಂದರೆಗಳನ್ನು ನಿವಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಬಿ) ಶುದ್ಧೀಕರಿಸಿದ ಖಾದ್ಯ ತೈಲಗಳ ಮೇಲಣ ಪ್ರವೇಶ ತೆರಿಗೆಗೆ ೧-೪-೧೯೮೭ರಿಂದ ಪರಿಣಾಮಕಾರಿಯಾಗುವಂತೆ ವಿನಾಯಿತಿ ನೀಡಲಾಗುವುದು.

ಸಿ) ಬೀಜ ತೆಗೆದಿರುವ ಅಥವಾ ಬೀಜತೆಗೆಯದ ಹತ್ತಿಯನ್ನು ''ಕೃಷಿ ಉತ್ಪನ್ನ''ದ ವರ್ಗದಲ್ಲಿ ಸೇರಿಸಲಾಗುವುದು ಮತ್ತು ೧-೪-೧೯೮೭ರಿಂದ ಪರಿಣಾಮಕಾರಿಯಾಗುವಂತೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.

೫೪. ಮನರಂಜನಾ ತೆರಿಗೆ

೧) ಮುಂದೆ ಕೊಟ್ಟಿರುವಂತೆ ಮನರಂಜನಾ ತೆರಿಗೆ ದರಗಳನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ.—

ಪ್ರವೇಶ ದರ	ಮನರಂಜನಾ ತೆರಿಗೆ ಶೇಕಡಾವಾರಿನಲ್ಲಿ	ಅಧಿಭಾರ	ಒಟ್ಟು (ಪ್ರವೇಶ ದರದ ಶೇಕಡಾವಾರು)
ರೂಪಾಯಿ ೧-೨೫ರ ವರೆಗೆ	೩೫	ಶೇಕಡ ೩೫ (೧೦೦ರಷ್ಟು ತೆರಿಗೆ)	೭೦
ರೂಪಾಯಿ ೧-೨೫ರಿಂದ ರೂಪಾಯಿ ೨-೫೦ರ ವರೆಗೆ	೪೫	ಶೇಕಡ ೪೫ (೧೦೦ರಷ್ಟು ತೆರಿಗೆ)	೯೦
ರೂಪಾಯಿ ೨-೫೦ ಮತ್ತು ಅದಕ್ಕೂ ಹೆಚ್ಚು	೫೫	ಶೇಕಡ ೫೫ (೧೦೦ರಷ್ಟು ತೆರಿಗೆ)	೧೧೦

೨) ವಿಡಿಯೋ ಪ್ರದರ್ಶನಗಳ ಮೇಲೆ ಸಂದಾಯ ಮಾಡುವ ಮಾಸಿಕ ತೆರಿಗೆಯನ್ನು ೧,೦೦೦ ರೂಪಾಯಿಗಳಿಂದ ೨,೫೦೦ ರೂಪಾಯಿಗಳಿಗೆ ಏರಿಸಲಾಗಿದೆ.

೫೫. ವೃತ್ತಿ ತೆರಿಗೆ

೧) ವೃತ್ತಿ ತೆರಿಗೆ ಅಧಿನಿಯಮದಲ್ಲಿನ ''ವೇತನ'' ಎಂಬ ಪದದ ಪರಿಭಾಷೆಯನ್ನು ''ಒಟ್ಟು ವೇತನ'' ಎಂಬ ಅರ್ಥ ಬರುನಂತೆ ತಿದ್ದುಪಡಿ ಮಾಡಲು ಪ್ರಸ್ತಾವಿಸುತ್ತೇನೆ. ವೃತ್ತಿ ತೆರಿಗೆಯ ಉದ್ದೇಶಕ್ಕಾಗಿ ನಾನು ವೇತನದ ಮಿತಿಯನ್ನು ತಿಂಗಳೊಂದಕ್ಕೆ ೧,೨೦೦ ರೂಪಾಯಿಗಳಿಂದ ೨,೦೦೦ ರೂಪಾಯಿಗಳಿಗೆ ಹೆಚ್ಚಿಸಲು ಪ್ರಸ್ತಾವಿಸಿದ್ದೇನೆ.

(ii) ೧೫ ಎಕರೆಗಳಷ್ಟು ಹಿಡುವಳಿಗಳನ್ನು ಹೊಂದಿದ್ದು, ಅವುಗಳಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ವ್ಯವಸಾಯದಾರರಿಗೆ ವೃತ್ತಿ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.

೫೬. ವಿಲಾಸ ತೆರಿಗೆ ;

(i) ವಿಲಾಸ ತೆರಿಗೆಯ ದರಗಳನ್ನು ಈ ಮುಂದಿನಂತೆ ಪರಿಷ್ಕರಿಸಲು ಪ್ರಸ್ತಾವಿಸಲಾಗಿದೆ.—

ದಿನ ಒಂದಕ್ಕೆ ಕೊಠಡಿ ಬಾಡಿಗೆ	ಪ್ರಸ್ತಾವಿಸಿದ ತೆರಿಗೆ ದರ
೩೫ ರೂಪಾಯಿ ಮತ್ತು ಅದಕ್ಕೂ ಹೆಚ್ಚು ಆದರೆ ೧೦೦ ರೂಪಾಯಿಗಳಿಗಿಂತ ಕಡಿಮೆ	ಶೇಕಡ ೫
೧೦೦ ರೂಪಾಯಿ ಮತ್ತು ಅದಕ್ಕೂ ಹೆಚ್ಚು ಆದರೆ ೨೦೦ ರೂಪಾಯಿಗಳಿಗಿಂತ ಕಡಿಮೆ	ಶೇಕಡ ೭.೫
೨೦೦ ರೂಪಾಯಿ ಮತ್ತು ಅದಕ್ಕೂ ಹೆಚ್ಚು	ಶೇಕಡ ೧೦

(ii) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ವೃದ್ಧಿ ಪಡಿಸುವ ಸಲುವಾಗಿ ವಿಲಾಸ ತೆರಿಗೆಯ ದರಗಳಲ್ಲಿ ಈ ಇಳಿತವನ್ನು ಮಾಡಲಾಗಿದೆ ಮತ್ತು ಇದು ಅಪೇಕ್ಷಿತ ಪರಿಣಾಮವನ್ನು ಬೀರುವುದೆಂಬ ಭರವಸೆ ನನಗಿದೆ.

(iii) ದಿನಾಂಕ ೧-೮-೧೯೭೫ ರಿಂದ ೩೧-೩-೧೯೭೬ರ ನಡುವಣ ಅವಧಿಯಲ್ಲಿ ವಿಲಾಸ ತೆರಿಗೆಯನ್ನು ಸಂಗ್ರಹಿಸದಂತಹ ಹೋಟಲುದಾರರಿಗೆ ಈ ಸಂದಾಯದಿಂದ ವಿನಾಯಿತಿ ನೀಡಲು ಪ್ರಸ್ತಾವಿಸಲಾಗಿದೆ.

೫೭. ಜೂಜು ತೆರಿಗೆ :

ಕಳೆದ ಬಜೆಟ್‌ನಲ್ಲಿ ಜೂಜು ತೆರಿಗೆಗೆ ಸಂಬಂಧಿಸಿದಂತೆ, ಬೆಂಗಳೂರಿನಲ್ಲಿ ನಡೆಯುವ ಕುದುರೆ ಪಂದ್ಯಗಳ ಸಂದರ್ಭದಲ್ಲಿ ಸ್ಥಳದಲ್ಲಿದ್ದು ಪಣ ಕಟ್ಟುವವರಿಗೆ ಶೇಕಡ ೧೦ಕ್ಕೆ ಮತ್ತು ಸ್ಥಳದಲ್ಲಿರದೆ ಪಣ ಕಟ್ಟುವವರಿಗೆ ಶೇಕಡ ೭.೫ಕ್ಕೆ ಇಳಿಸಲಾಗಿತ್ತು. ಆದಾಯದಲ್ಲಿ ಹೆಚ್ಚಳ ಉಂಟಾಗುವುದೆಂಬ ನಿರೀಕ್ಷೆಯಿಂದ ಹೀಗೆ ಮಾಡಲಾಗಿತ್ತು. ಆದರೆ, ವಾಸ್ತವದಲ್ಲಿ ಹೀಗಾಗಲಿಲ್ಲ. ಆದುದರಿಂದ, ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ನಡೆಯುವ ಕುದುರೆ ಪಂದ್ಯಗಳಿಗೆ ಸಂಬಂಧಿಸಿದಂತೆ ಜೂಜು ತೆರಿಗೆಯನ್ನು ಪಂದ್ಯದ ಸ್ಥಳದಲ್ಲಿದ್ದು ಪಣ ಕಟ್ಟುವವರಿಗೆ ಶೇಕಡ ೧೫ಕ್ಕೆ ಮತ್ತು ಸ್ಥಳದಲ್ಲಿರದೆ ಪಣ ಕಟ್ಟುವವರಿಗೆ ಶೇಕಡ ೧೭ಕ್ಕೆ ಏರಿಸಲು ಉದ್ದೇಶಿಸಿದ್ದೇನೆ.

58. ಕೃಷಿ ವರಮಾನ ತೆರಿಗೆ ;

ತೆರಿಗೆಯ ಸ್ವರೂಪವನ್ನು ಸುವ್ಯವಸ್ಥಿತಗೊಳಿಸಲು ಹಾಗೂ ಕಾರ್ಯ ವಿಧಾನಗಳನ್ನು ಸರಳೀಕರಿಸಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

(i) ಒಂದು ವಿಘಟಿತ ಫರ್ಮಿನ ಸಂಬಂಧದಲ್ಲಿ ಅದು ಮುಂದುವರಿಯುವುದು ನಿಂತು ಹೋದ ಮೇಲೆ ಪಡೆದ ಆದಾಯಗಳ ತೆರಿಗೆ ನಿರ್ಧರಣೆಗೆ ಅವಕಾಶ ಕಲ್ಪಿಸುವ ಸಲುವಾಗಿ ಕೃಷಿ ವರಮಾನ ತೆರಿಗೆ ಅಧಿನಿಯಮದ ಉಪ-ಬಂಧಗಳನ್ನು ತಿದ್ದುಪಡಿ ಮಾಡಲಾಗುವುದು.

(ii) ತೆರಿಗೆಯಿಂದ ತಪ್ಪಿಸಿಕೊಂಡ ಆದಾಯದ ಮೊಬಲಗು ಎಷ್ಟೇ ಇರಲಿ, ಆ ಆದಾಯವನ್ನು ನಿರ್ಧರಿಸುವುದಕ್ಕಾಗಿ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದ ಮೇರೆಗಿನ ಕಾಲಮಿತಿಯನ್ನು ೩ ವರ್ಷಗಳಿಂದ ೫ ವರ್ಷಗಳಿಗೆ ಏರಿಸುವುದು.

(iii) ಕೃಷಿ ವರಮಾನ ತೆರಿಗೆ ಅಧಿನಿಯಮದ ಮೇರೆಗೆ ಉಪಬಂಧಿಸಲಾದಂತೆ ತಡಮಾಡಿ ಮಾಡಲಾದ ಮರು ಸಂದಾಯಗಳಿಗೆ, ಅಧಿನಿಯಮದ ಮೇರೆಗೆ, ವರ್ಷವೊಂದಕ್ಕೆ ಶೇಕಡಾ ೧೨ರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುವುದು.

(iv) ೨೫ ಎಕರೆಗಳಿಗಿಂತ ಕಡಿಮೆ ಹಿಡುವಳಿ ಹೊಂದಿರುವಂತಹ ಮತ್ತು, ಕಾಫಿಯ ಹೊರತಾದ ಪ್ಲಾಂಟೇಷನ್ ಬೆಳೆಗಳನ್ನು ಪ್ರಧಾನ ಬೆಳೆಗಳಾಗಿ ಬಾಳೆ, ತೆಂಗು, ಏಲಕ್ಕಿ ಮುಂತಾದ ಬೆಳೆಗಳ ಜೊತೆಯಲ್ಲಿ ಬೆಳೆಸುವಂಥ, ವ್ಯವಸಾಯಗಾರರಿಗೆ ರಾಜಿ–ತೆರಿಗೆ ಸಂದಾಯದ ಸೌಕರ್ಯವನ್ನು ವಿಸ್ತರಿಸುವುದು.

(v) ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದ ಮೇರೆಗೆ ತೆರಿಗೆ ನಿರ್ಧಾರಣೆಯನ್ನು ಪೂರೈಸುವುದಕ್ಕಾಗಿ ೩ ವರ್ಷಗಳ ಮಿತಿಯನ್ನು ಗೊತ್ತು ಪಡಿಸುವುದು.

(vi) ತೆರಿಗೆದಾರನು ನಷ್ಟವನ್ನೇ ಅನುಭವಿಸುತ್ತಿದ್ದರೂ ಅವನು ಆದಾಯ ವಿವರಣೆಗಳನ್ನು ಸಲ್ಲಿಸಬೇಕೆಂದು ಅಗತ್ಯಪಡಿಸುವಂತೆ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು.

(vii) ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದ ೫ (ಎ) ಪ್ರಕರಣದ ಕೆಳಗೆ ಕಳೆತಗಳ ಮಿತಿಯನ್ನು ಈಗಿರುವ ಮಿತಿಯಿಂದ, ೪೦,೦೦೦ ರೂಪಾಯಿಗಳಿಗೆ ಏರಿಸುವುದು.

(viii) ಒಂದು ಫರ್ಮ್ ತನ್ನ ವ್ಯವಹಾರವನ್ನು ನಿಲ್ಲಿಸಿದ ವರ್ಷದ ಒಂದು ಭಾಗದಲ್ಲಿ ಬಂದ ವರಮಾನಕ್ಕೆ ಸಂಬಂಧಿಸಿದಂತೆ, ಆ ಫರ್ಮ್ ನಿಂತು ಹೋದ ವರ್ಷದಲ್ಲೇ ತೆರಿಗೆ ನಿರ್ಧಾರಣೆ ಮಾಡಲು ಅನುಕೂಲ ಮಾಡಿ ಕೊಡುವ ಸಲುವಾಗಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು.

(ix) ನೋಂದಾಯಿಂತ ಫರ್ಮ್‌ನ ವರಮಾನವನ್ನು ಆಧಾರವಾಗಿರಿಸಿಕೊಂಡು ಆ ಫರ್ಮ್‌ನ ಕೃಷಿ ವರಮಾನವನ್ನು ನಿರ್ಧಾರಣೆ ಮಾಡಲು ಅವಕಾಶ ಕಲ್ಪಿಸುವುದಕ್ಕಾಗಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು.

(x) ಸದ್ಯದಲ್ಲಿ ಕೃಷಿ ವರಮಾನ ತೆರಿಗೆ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ, ಆದರೆ ತೆರಿಗೆಯಿಂದ ತಪ್ಪಿಸಿಕೊಂಡ ವರಮಾನಕ್ಕೆ ಸಂಬಂಧಿಸಿದ ತೆರಿಗೆ ನಿರ್ಧಾರಣೆಗಳ ವಿರುದ್ಧ ಮತ್ತು ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಆದೇಶಗಳ ವಿರುದ್ಧ ಅಪೀಲು ಹೋಗುವ ಅವಕಾಶವಿಲ್ಲ. ಈ ಅಧಿನಿಯಮವನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ಅಂತಹ ಆದೇಶಗಳ ವಿರುದ್ಧ ಅಪೀಲು ಹೋಗುವ ಅವಕಾಶ ಕಲ್ಪಿಸಲು ಉದ್ದೇಶಿಸಿದ್ದೇನೆ.

೫೯. ಅಬ್ಕಾರಿ :

(i) ಸಾರಾಯಿಗೆ ಈಗ ನಿಗದಿಪಡಿಸಲಾದ ಪರಮಾವಧಿ ಮಾರಾಟ ಬೆಲೆ ಲೀಟರ್ ಒಂದಕ್ಕೆ ೩೦ ರೂಪಾಯಿ. ದಿನಾಂಕ ೧-೭-೧೯೮೭ ರಿಂದ ಜಾರಿಗೆ ಬರುವಂತೆ, ಈ ಪರಮಾವಧಿ ಮಿತಿಯನ್ನು ತೆಗೆದು ಹಾಕಲಾಗುವುದು.

(ii) ದಿನಾಂಕ ೧-೭-೧೯೮೭ ರಿಂದ ಜಾರಿಗೆ ಬರುವಂತೆ, ಸಾರಾಯಿಯ ಮೇಲಿನ ಶುಲ್ಕವನ್ನು ಲೀಟರ್ ಒಂದಕ್ಕೆ ೪ ರೂಪಾಯಿಯಿಂದ ೫ ರೂಪಾಯಿಗೆ ಏರಿಸಲು ಉದ್ದೇಶಿಸುತ್ತೇನೆ.

(iii) ಭಾರತದಲ್ಲಿ ತಯಾರಿಸಲಾದ ಮದ್ಯಗಳಿಗೆ ಅಬ್ಕಾರಿ ಶುಲ್ಕವನ್ನು ದಿನಾಂಕ ೧-೭-೧೯೮೭ ರಿಂದ ಜಾರಿಗೆ ಬರುವಂತೆ, ಲೀಟರ್ ಒಂದಕ್ಕೆ ೨೬ ರೂಪಾಯಿಗಳಿಂದ ೩೦ ರೂಪಾಯಿಗಳಿಗೆ ಏರಿಸಲು ಉದ್ದೇಶಿಸುತ್ತೇನೆ.

(iv) ಸಿಎಲ್ ೧, ಸಿಎಲ್ ೨, ಸಿಎಲ್ ೪, ಸಿಎಲ್ ೬, ಸಿಎಲ್ ೮ ಮತ್ತು ಸಿಎಲ್ ೯ ಇವುಗಳ ಲೈಸೆನ್ಸ್ ಶುಲ್ಕವನ್ನು ಅನುಬಂಧ XIXರಲ್ಲಿ ಹೇಳಿರುವಂತೆ ಏರಿಸಲು ಉದ್ದೇಶಿಸುತ್ತೇನೆ.

(v) ಮದ್ಯಸಾರದ ದುರುಪಯೋಗವನ್ನು ತಪ್ಪಿಸುವುದಕ್ಕಾಗಿ ಇನ್ನು ಮುಂದೆ ಮದ್ಯಸಾರ ಆಧಾರಿತ ರಾಸಾಯನಿಕ ಉದ್ಯಮಗಳಿಗೆ ಕೇವಲ ಡಿನೇಚರ್ ಸ್ಪಿರಿಟನ್ನು ಬಳಸಲು

ಅವಕಾಶವೀಯಲಾಗುವುದು. ಜೀವ ರಕ್ಷಕ ಔಷಧಗಳು ಹಾಗೂ ಔಷಧ ದ್ರವ್ಯಗಳನ್ನು ತಯಾರಿಸುವ ಔಷಧ ತಯಾರಕ ಘಟಕಗಳಿಗೆ ಮಾತ್ರ ಔಷಧ ನಿಯಂತ್ರಕರಿಂದ ಪಡೆದ ಅವಶ್ಯಕತೆಯ ಪ್ರಮಾಣ ಪತ್ರವನ್ನು ತೋರಿಸಿದ ಮೇಲೆ ರೆಕ್ಟಿಫೈಡ್ ಸ್ಪಿರಿಟ್ಟನ್ನು ಒದಗಿಸಲಾಗುವುದು.

(vi) ಖಾಸಗಿಯಾಗಿ ನಡೆಸುವಂತಹ ಮದ್ಯದ ಅಂಗಡಿಗಳ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳ ಉಂಟಾಗುವುದನ್ನು ತಪ್ಪಿಸಲು ಸರ್ಕಾರವು ಪ್ರಸ್ತಾವಿಸಿದೆ. ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಂಗಡಿಗಳು, ಸಹಕಾರ ಸಂಘಗಳು ಮತ್ತು ಖ್ಯಾತ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು ತಮ್ಮ ಆವರಣದಲ್ಲಿ ಅಗತ್ಯ ಅನುಕೂಲಗಳನ್ನು ಮಾಡಿಕೊಂಡು ಮದ್ಯದ ಅಂಗಡಿಗಳನ್ನು ತೆರೆಯಲು ಮುಂದೆ ಬಂದಲ್ಲಿ, ಅವರಿಗೆ ಲೈಸೆನ್ಸ್ ನೀಡಲಾಗುವುದು. ಯಾವುದೇ ಸನ್ನಿವೇಶದಲ್ಲೂ ಮದ್ಯದ ಅಂಗಡಿಗಳಲ್ಲಿ ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡಲು ಅವಕಾಶ ನೀಡಲಾಗುವುದಿಲ್ಲ. ಅಂತಹ ಅಂಗಡಿಗಳ ಲೈಸೆನ್ಸ್‌ಗಳನ್ನು ಕೂಡಲೇ ರದ್ದುಪಡಿಸಲಾಗುವುದು.

೬೦. ಮೋಟಾರು ವಾಹನಗಳು :

(i) ವಿವಿಧ ವರ್ಗಗಳ ಮೋಟಾರು ವಾಹನಗಳ ಮೇಲಿನ ಮೋಟಾರು ವಾಹನ ತೆರಿಗೆಯನ್ನು ಅನುಬಂಧ XXರಲ್ಲಿ ಹೇಳಿರುವಂತೆ ಏರಿಸಲು ಉದ್ದೇಶಿಸಿದ್ದೇನೆ.

(ii) ಮೋಟಾರು ವಾಹನದ ಅಧಿನಿಯಮದ ಅನುಸೂಚಿಯ ಭಾಗ–ಬಿ ಯಲ್ಲಿ ಆನುಷಂಗಿಕ ಬದಲಾವಣೆಗಳನ್ನು ಮಾಡಲು ಸಹ ಉದ್ದೇಶಿಸುತ್ತೇನೆ.

೬೧. ಮುದ್ರಾಂಕ ಮತ್ತು ನೋಂದಣಿ :

(i) ಪ್ರಸಕ್ತ ಮಾರಾಟ, ದಾನ, ವಿನಿಮಯ, ಒಪ್ಪಂದ (ಸೆಟಲ್‌ಮೆಂಟ್) ಮತ್ತು ಭೋಗ್ಯ ಮುಂತಾದುವುಗಳ ಮೇಲೆ ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭ರ ೩೦ನೇ ಪ್ರಕರಣದ ಮೇರೆಗೆ ೧೦೦ ರೂಪಾಯಿ ೮೦ ರೂಪಾಯಿ ೭೦ ರೂಪಾಯಿಗಳ ಮೂರು ಭಿನ್ನ ದರಗಳಲ್ಲಿ ಮುದ್ರಾಂಕದ ಶುಲ್ಕವನ್ನು ವಿಧಿಸಲಾಗುತ್ತಿದೆ. ಈ ಮುದ್ರಾಂಕದ ಶುಲ್ಕದ ದರವನ್ನು ರಾಜ್ಯಾದ್ಯಂತ ೧,೦೦೦ಕ್ಕೆ ೧೦೦ ರೂಪಾಯಿಯ ಸಮಾನ ದರವಾಗಿ ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

(ii) ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭ರ ೪೫ಎ ಪ್ರಕರಣ ಉಪಬಂಧಗಳನ್ನು ಬೆಂಗಳೂರು ಜಿಲ್ಲೆಯಲ್ಲಿ ಒಳಗೊಳ್ಳುವ ಪ್ರದೇಶಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

(iii) ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭ರ ಪ್ರಕರಣ ೫೪ ಮೇರೆಗೆ ವಿಧಿಸಲಾದ ಮುದ್ರಾಂಕ ಶುಲ್ಕವನ್ನು ೫ ರೂಪಾಯಿಯಿಂದ ೧೦ ರೂಪಾಯಿಗೆ ಏರಿಸಲು ನಾನು ಉದ್ದೇಶಿಸಿದ್ದೇನೆ.

೬೨. ಲೆಕ್ಕ ಪತ್ರಗಳ ಮರು ವರ್ಗೀಕರಣ :

ದಿನಾಂಕ ೧–೪–೧೯೮೭ ರಿಂದ ಜಾರಿಗೆ ಬರುವಂತೆ ಸರ್ಕಾರದ ಬಜೆಟ್ ಮತ್ತು ಲೆಕ್ಕಪತ್ರಗಳ ಹಂಚಿಕೆಯ ಮರು ವರ್ಗೀಕರಣದ ಸ್ವರೂಪವನ್ನು ರಾಷ್ಟ್ರಪತಿಯವರು ಭಾರತ ಸಂವಿಧಾನದ ೧೫೦ನೇ ಅನುಚ್ಛೇದದ ಮೇರೆಗೆ ಪರಿಷ್ಕರಿಸಿದ್ದಾರೆ. ಲೆಕ್ಕಗಳ ವರ್ಗೀಕರಣ ಮತ್ತು ಅಭಿವೃದ್ಧಿಯ ಯೋಜನಾ ಶೀರ್ಷಿಕೆಗಳ ನಡುವೆ ಗರಿಷ್ಠ ಹೊಂದಾಣಿಕೆ ಉಂಟುಮಾಡಲು ಈ ರೀತಿ ಮಾಡಲಾಗಿದೆ. ಗಣಕೀಕರಣಕ್ಕೆ ಅನುವಾಗುವ ರೀತಿಯಲ್ಲಿ ಕೋಡಿಂಗ್ ವ್ಯವಸ್ಥೆಯನ್ನು ಪರಿಷ್ಕರಿಸಲಾಗಿದೆ. ಈ ಸ್ವರೂಪವನ್ನು ಎಸ್ಟಿಮೇಟ್ಸ್ ಕಮಿಟಿಯು ಅನುಮೋದಿಸಿದೆ. ಇದಕ್ಕೆ ತಕ್ಕಂತೆ ೧೯೮೭–೮೮ರ ಬಜೆಟನ್ನು ತಯಾರಿಸಲಾಗಿದೆ.

೧೯೮೬–೮೭ಕ್ಕಾಗಿ ಪರಿಷ್ಕೃತ ಅಂದಾಜು :

